ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in
KEYA SIMPLY FANTASTIC
RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2013

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-13 ಸಂಚಿಕೆ-6 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.

# ಸಮಾಜದ ಸಂಘ ಸಂಸ್ಥೆಗಳಿಂದ ಶ್ರೀ ಶಂಕರ ಜಯಂತ್ಯುತ್ಸವ ಆಚರಣೆ

**ದೇಶದಾದ್ಯಂತ ಅಲ್ಪ ಸಮಯದಲ್ಲಿ 4 ಬಾರಿ ಸಂಚಾರವನ್ನುಗೈದು ಅತ್ಯುನ್ನತ ಜ್ಞಾನವನ್ನು ಸಂಪಾದಿಸಿ ಅದನ್ನು ದೇಶದಾದ್ಯಂತ ಪಸರಿಸುತ್ತಾ ಭಾರತದ ಸನಾತನ ಧರ್ಮವನ್ನು ಸಂರಕ್ಷಿಸಿದ ಕೀರ್ತಿಗೆ ಒಳಗಾದ ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವವನ್ನು ನಾಡಿನ ಬೇರೆ ಬೇರೆ ಸಂಘ ಸಂಸ್ಥೆಗಳು ವಿಶಿಷ್ಟ ಹಾಗೂ ವಿನೂತನ ರೀತಿಯಲ್ಲಿ ಆಚರಿಸಿದ ವರದಿಗಳು ಬಂದಿವೆ...**

### ಉಡುಪಿಯಲ್ಲಿ

ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) , ಜ್ಞಾನ ಭಾರತಿ (ರಿ), ಹಾಗೂ ಹವ್ಯಕ ಸಭಾ (ರಿ) ಇವರ ಜಂಟಿ ಆಶ್ರಯದಲ್ಲಿ ಶ್ರೀ ಶಂಕರ ಜಯಂತ್ಯುತ್ಸವವನ್ನು ಉಡುಪಿಯ ಶಾರದಾ ಮಂಟಪದಲ್ಲಿ ಆಚರಿಸಲಾಯಿತು. ಬೆಳಿಗ್ಗೆ ವಿದ್ಯಾರ್ಥಿಗಳಿಗಾಗಿ ಶ್ಲೋಕ ಕಂಠಪಾಠ, ರಂಗವಲ್ಲಿ , ಹಾಗೂ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ನಂತರ 11.30ಕ್ಕೆ ಧಾರ್ಮಿಕ ಪ್ರವಚನವು ನೆರವೇರಿತು . ಪ್ರವಚನಕಾರರಾಗಿ ವೇದಮೂರ್ತಿ ಮಂಜುನಾಥ ಜೋಯ್ಸರು ಶ್ರೀ ಶಂಕರ ತತ್ವ ದರ್ಶನದ ಬಗ್ಗೆ ವಿವರಿಸುತ್ತಾ "ಪಂಚಾಯತನ ಪದ್ಧತಿಯಂತೆ ಮೋಕ್ಷ ಮಾರ್ಗಕ್ಕೆ ಭಕ್ತಿಯೊಂದೇ ಮುಖ್ಯ ಸಾಧನವೆಂದು ಸಾರಿದ ಆಚಾರ್ಯರು ಮಂಡನ ಮಿಶ್ರ, ಕುಮಾರಿಲ ಭಟ್ಟರಂತಹ ವಿದ್ವಾಂಸರಲ್ಲಿ ತರ್ಕವನ್ನು ಮಾಡಿ ಅವರ ಮನ ಗೆದ್ದು ತಮ್ಮವರನ್ನಾಗಿಸಿಕೊಂಡ ವಿಚಾರ ಬಹಳ ಪ್ರಶಂಸನೀಯವಾದುದು. ಅಂತಹ ಶ್ರೀ ಶಂಕರರ ಹೆಸರನ್ನು ಉಚ್ಚರಿಸುವುದೇ ಪುಣ್ಯದ ಕೆಲಸ. ಉಡುಪಿಯಂತಹ ನಗರದಲ್ಲಿ ಈ ರೀತಿಯಲ್ಲಿ ಶಾಂಕರ ತತ್ವ ವಿಚಾರವನ್ನು ಪ್ರಚಾರ ಮಾಡುವುದು ಅತಿಪುಣ್ಯದ ಕಾರ್ಯ"ವೆಂದು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮೂಲ್ಕಿಯ ವೇದ ಪ್ರಕಾಶ ವೇದ ಪಾಠಶಾಲೆಯ ಉಪನ್ಯಾಸಕರಾದ ಪಾವಂಜೆಯ ಶ್ರೀ ರವಿ ಪ್ರಕಾಶ ಉಪಾಧ್ಯಾಯರು ಶ್ರೀ ಶಂಕರಾಚಾರ್ಯರ ರಚನೆಯ ಕೆಲವು ಶ್ಲೋಕಗಳನ್ನು ವಾಚಿಸಿ ಅವುಗಳ ಅರ್ಥ ವಿವರಣೆಯನ್ನು ನೀಡಿ, "ನಮ್ಮ ಜೀವನದಲ್ಲಿ ಒಂದು ವೇದವನ್ನೇ ಪೂರ್ಣ ಓದಲು ನಮಗೆ ಅಸಾಧ್ಯವಾಗಿರುವಾಗ ಕೇವಲ 32 ವರ್ಷಗಳ ಆಯುಷ್ಯದಲ್ಲಿ ಆಚಾರ್ಯರು ಓದಿದ ವೇದಗಳು, ಶಾಸ್ತ್ರಗಳು ಹಾಗೂ ಅವುಗಳನ್ನು ಅರ್ಥೈಸಿಕೊಂಡು ಇತರರಿಗೂ ತಿಳಿಹೇಳಿದ ರೀತಿ, ಅಲ್ಲದೆ ಮಹತ್ತರವಾದ ಕೃತಿಗಳ ರಚನೆ ಮಾಡಿದ್ದು ಆಚಾರ್ಯರ ಬಹು ದೊಡ್ಡ ಸಾಧನೆ" ಎಂದರು.



ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ನಡೆಯಿತು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ಶ್ರೀ ಕೆ. ವೇಣುಗೋಪಾಲರಾಯರು ಎಲ್ಲರನ್ನು ಸ್ವಾಗತಿಸಿದರು. ಜ್ಞಾನಭಾರತಿಯ ಉಪಾಧ್ಯಕ್ಷ ಶ್ರೀ ಉಪ್ಪಂಗಳ ರಾಮ ಭಟ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ಅರವಿಂದಕುಮಾರ್, ಜ್ಞಾನ ಭಾರತಿಯ ಕಾರ್ಯದರ್ಶಿ ಶ್ರೀ ಎಸ್ ಎಲ್ ಕಾರ್ಣಿಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಳಿಕ ಶ್ರೀ ಶಾರದಾ ಮಂದಿರದಲ್ಲಿ ಶ್ರೀ ಶಾರದೆಗೆ, ಆಚಾರ್ಯ ಶಂಕರರಿಗೆ ವಿಶೇಷ ಪೂಜೆನೆರವೇರಿತು.

### ಕೋಟೆಕಾರಿನಲ್ಲಿ

ಕೋಟೆಕಾರು ಶ್ರೀ ಶೃಂಗೇರಿ ಮಠದಲ್ಲಿ ಮೇ 13ರಿಂದ 15ರವರೆಗೆ ಶಂಕರ ಜಯಂತ್ಯುತ್ಸವವನ್ನು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು.

ಮೇ 13ರಂದು ಸಂಜೆ ಕೋಟೆಕಾರಿನ ಜೆ ಎಸ್ ಆಸ್ಪತ್ರೆಯ ವೈದ್ಯರಾದ ಡಾ। ವಿಜಯಕುಮಾರ್ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಮಂಗಳೂರಿನ ಡಾ। ಮೇಘಶ್ಯಾಮರಾವ್ ಅವರ ಸಭಾಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಜಿಲ್ಲಾ ಸರಕಾರಿ ನ್ಯಾಯವಾದಿಗಳಾದ ಶ್ರೀ ಮಹಾಬಲ ಶೆಟ್ಟಿಯವರು ಪ್ರಧಾನ ಅಭ್ಯಾಗತರಾಗಿದ್ದರು. ಅಂದು ಹೊಸದುರ್ಗದ ಹರಿದಾಸ ಶ್ರೀ ಜಯಾನಂದ ಕುಮಾರರಿಂದ "ಶ್ವೇತಕುಮಾರ ಚರಿತ್ರೆ" ಹರಿಕಥೆ ನೆರವೇರಿತು.

ದಿನಾಂಕ 14ರಂದು ಸಂಜೆ ಹರಿದಾಸ ಪೊಳಲಿ ಶ್ರೀ ಜಗದೀಶ ದಾಸರಿಂದ ಶಿವ ಭಕ್ತ ವಿಜಯ ಹರಿಕಥೆ ನೆರವೇರಿತು. ದಿನಾಂಕ 15ರಂದು ಬೆಳಿಗ್ಗೆ ಶ್ರೀ ರುದ್ರಯಾಗ ನಡೆದು ಮಧ್ಯಾಹ್ನ ಅನ್ನ ಸಂತರ್ಪಣೆ ನೆರವೇರಿತು. ಸಂಜೆ ಹರಿದಾಸ ಡಾ। ಎಸ್ ಪಿ ಗುರುದಾಸ್‌ರಿಂದ "ಜಗದ್ಗುರು ಶಂಕರಾಚಾರ್ಯ"ರ ಬಗ್ಗೆ ಹರಿಕಥೆ ನೆರವೇರಿತು. ರಾತ್ರಿ ಆಚಾರ್ಯ ಪೂಜೆ, ವಸಂತೋತ್ಸವ, ಪ್ರಸಾದ ವಿತರಣೆ ನಡೆಯಿತು.


### ಪಡುಬಿದ್ರಿಯಲ್ಲಿ

ಪಡುಬಿದ್ರಿ– ಪಾದೆಬೆಟ್ಟು ಶ್ರೀ ವಿಷ್ಣು ಮೂರ್ತಿ ದೇವಸ್ಥಾನದಲ್ಲಿ ತಾ.15–05–2013 ನೇ ಬುಧವಾರದಂದು ಶ್ರೀ ವಿಷ್ಣುಮೂರ್ತಿ ದೇವರ ವರ್ಧಂತ್ಯುತ್ಸವ ಹಾಗೂ ಶಂಕರ ಜಯಂತಿಯನ್ನು ಸಮಾಜ ಬಾಂಧವರೊಡಗೂಡಿ ಆಚರಿಸಲಾಯಿತು. ಬೆಳಿಗ್ಗೆ ಗಂಟೆ 11.30ರ ತನಕ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ಮಹಿಳಾ ವೇದಿಕೆಯ ಸದಸ್ಯೆಯರಿಂದ ಹಾಗೂ ಮಂಗಳೂರಿನ ಸುಬ್ರಹ್ಮಣ್ಯ ಸಭಾದ ಮಹಿಳಾ ಸದಸ್ಯೆಯರಿಂದ ಶ್ರೀ ವಿಷ್ಣು ಸಹಸ್ರನಾಮ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ಬಳಿಕ ಶ್ರೀಮದ್ ಶಂಕರಾಚಾರ್ಯರಿಗೆ ಅರ್ಚಕರಾದ ಶ್ರೀ ಜಗಧಾಭಿರಾಮ ಸ್ವಾಮಿಯವರು ಪೂಜೆ ಸಲ್ಲಿಸಿದರು.

ಮಂಗಳೂರಿನ ಸುಬ್ರಹ್ಮಣ್ಯ ಸಭಾ ಅಧ್ಯಕ್ಷರಾದ ಶ್ರೀಯುತ ಸಿ.ಎಸ್.ರಾವ್ ಇವರು ಶ್ರೀಮದ್ ಶಂಕರಾಚಾರ್ಯರ ಜೀವನ ವೈಶಿಷ್ಟಗಳ ಬಗ್ಗೆ ಅವರು ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆಗಳ ಬಗ್ಗೆ ನೆರೆದ ಸಮಾಜ–ಬಾಂಧವರಿಗೆ ಸವಿಸ್ತಾರವಾಗಿ ತಿಳಿಸಿದರು. ಪ್ರಸಾದ ವಿತರಣೆ ಬಳಿಕ ಅನ್ನಸಂತರ್ಪಣೆ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ನಮ್ಮ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದು. ಬಹಳ ಸಂತಸದ ವಿಷಯ.

### ಕಾರ್ಕಳದಲ್ಲಿ

"ಭಕ್ತಿಯಿಂದ ಮಾಡುವ ಭಜನೆ, ಪೂಜೆಗಳು ಮಾನವನ ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ನೆಮ್ಮದಿಗೆ ಕಾರಣವಾಗುತ್ತವೆ. ಎಲ್ಲಾ ಭಕ್ತರು ಮನಸ್ಸಿನಲ್ಲಿ ಭಗವಂತನನ್ನು ಸ್ಮರಿಸುತ್ತಾರೋ ಅಲ್ಲಿ ಶಾಂತಿ, ಸಮೃದ್ಧಿ, ಪ್ರಗತಿ ನೆಲೆಯಾಗುವುದನ್ನು ಕಾಣಬಹುದು. ಬಾಹ್ಯಾಡಂಬರದ ದಾಂ ಧೂಂ ಉತ್ಸವಗಳು ಭಗವಂತನ ಸಾಕ್ಷಾತ್ಕಾರಕ್ಕೆ ಕಾರಣವಾಗಲಾರದು. ಒಂದೆಡೆ ಸಾಮೂಹಿಕವಾಗಿ ಪ್ರಶಾಂತ ವಾತಾವರಣದಲ್ಲಿ ಕುಳಿತು ಭಗವಂತನನ್ನು ಭಜಿಸಿದರೆ ನಮ್ಮ ಇಷ್ಟಾರ್ಥಗಳು ಈಡೇರುತ್ತವೆ. ಯಾವುದೇ



(4ನೇ ಪುಟಕ್ಕೆ....)

**ಲೇಖಕರಲ್ಲಿ ವಿನಂತಿ**

**ಶ್ರೀಶಾರದ ಪತ್ರಿಕೆಗಳಿಗೆ ಕಳುಹಿಸುವ ಯಾವುದೇ ಲೇಖನಗಳನ್ನು ಸ್ಫುಟವಾಗಿ, ಸ್ಪಷ್ಟವಾಗಿ ಕಾಣುವಂತೆ ಫುಲ್‌ಸ್ಕೇಲ್ ಕಾಗದದ ಒಂದೇ ಮಗ್ಗುಲಲ್ಲಿ ಬರೆದು ಅಥವಾ ಟೈಪ್ ಮಾಡಿಸಿ (ಡಿಟಿಪಿ) ಶ್ರೀಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿ ಕಳುಹಿಸಬೇಕಾಗಿ ವಿನಂತಿ.**

**–ಸಂಪಾದಕ ಮಂಡಳಿ**

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು ಮತ್ತು ಸುದ್ದಿಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

## ಚಿಂತನ

ಖ್ಯಾತ ಚಲನ ಚಿತ್ರ ನಟರೊಬ್ಬರು ಉಗ್ರರೊಂದಿಗೆ ನಂಟು ಹೊಂದಿದ್ದು, ಶಸ್ತ್ರಾಸ್ತ್ರಗಳೊಂದಿಗೆ ಪೋಲೀಸರಿಗೆ ಸಿಕ್ಕಿಬಿದ್ದು ನ್ಯಾಯಾಲಯ ಆತನಿಗೆ ಅಪರಾಧಿ ಎಂದು ಘೋಷಿಸಿ ಶಿಕ್ಷೆಯನ್ನೂ ವಿಧಿಸಿತು. ಬೇರೆ ಅಪರಾಧಿಗಳನ್ನಾದರೆ ಆಗಲೇ ಸೆರೆಮನೆಗೆ ತಳ್ಳಿ ಶಿಕ್ಷೆಯನ್ನು ಜ್ಯಾರಿಗೊಳಿಸುವ ನ್ಯಾಯಾಲಯ ಈತನ ವಿಷಯದಲ್ಲಿ ಅದೇನೋ ಕಾರಣ ನೀಡಿ ಒಂದಷ್ಟು ಸಮಯಾವಕಾಶ ನೀಡಿ ಮತ್ತೆ ಶರಣಾಗಲು ತಿಳಿಸಿತು.


ಅದೇನೇ ಇದ್ದರೂ ಆತನು ಮಾಡಿದ ಅಪರಾಧ ರಾಷ್ಟ್ರದ್ರೋಹದ್ದೇ ಅಲ್ಲವೇ? ಆದರೂ ನಮ್ಮ ಪತ್ರಿಕೆಗಳು, ಮಾಧ್ಯಮಗಳು ಆತನು ಸೆರೆಮನೆಗೆ ಹೋಗುವ (ಶರಣಾಗುವ) ವಿಚಾರವನ್ನು ಬಣ್ಣಿಸಿ ಪ್ರಚಾರ ಮಾಡಿದ್ದೇನು? ಆತ ಸೆರೆಮನೆಗೆ ಬಂದ ವಾಹನ, ಧರಿಸಿದ್ದ ಉಡುಪು, ಮುಖದ ಭಾವನೆಗಳು, ಜೊತೆಗಿದ್ದ ಸ್ನೇಹಿತರು–ಮನೆಯವರು...... ಮೊದಲಾದುವುಗಳನ್ನು ವರ್ಣಿಸಿ ಹೇಳಿದ್ದೇನು? ಅಷ್ಟೇ ಅಲ್ಲದೆ ಸೆರೆಮನೆಯಲ್ಲಿ ಆತನಿಗೆ ಕೆಲವು ರಿಯಾಯತಿಗಳು ಬೇಕೆಂದು ಆತನ ವಕೀಲರು ಕೇಳಿದ್ದಕ್ಕೆ ಘನ ನ್ಯಾಯಾಧೀಶರು ಅದನ್ನೂ ನೀಡಿದರಂತೆ! ಮನೆಯೂಟ, ಓದಲು ಪುಸ್ತಕ.........ಮೊದಲಾದುವುಗಳು ಒದಗುವುದಂತೆ! ಪುಣ್ಯಕ್ಕೆ ಸೇದಲು ಸಿಗರೇಟು ಕೊಡಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಿದ್ದು ನ್ಯಾಯಾಧೀಶರ ದೊಡ್ಡತನವೆನ್ನೋಣವೇ?

ಹೀಗೆ ಭಾರತದಾದ್ಯಂತ ರಾಷ್ಟ್ರದ್ರೋಹವೆಸಗಿದ (ಸಾಮಾನ್ಯ) ಜನರಿಗೂ ಇಂತಹ ಸೌಲಭ್ಯಗಳನ್ನು ಕೇಳಿದರೆ ಆಯಾಯ ನ್ಯಾಯಾಧೀಶರು ಕೊಡಲು ಸಾಧ್ಯವೇ? ಇಲ್ಲವೆಂದಾದರೆ ಸಾಮಾನ್ಯರಿಗೊಂದು ಕಾನೂನು–ಗಣ್ಯರಿಗೆ ಇನ್ನೊಂದು ಎನ್ನೋಣವೇ?

ಅಪರಾಧ ಮಾಡಿದ ವ್ಯಕ್ತಿಯ ಬಗ್ಗೆ ಈ ರೀತಿಯ ವೈಭವೀಕರಣ, ಸವಲತ್ತು ನೀಡುವುದು, ರಿಯಾಯತಿ ಕೊಡುವುದು ಇದಾವುದೂ ಸಲ್ಲದು. ಹೀಗೆ ಮಾಡಿದರೆ ತಾರತಮ್ಯ ಎಸಗಿದಂತೆ; ಮಾತ್ರವಲ್ಲ ಅಪರಾಧಗಳು ಇನ್ನಷ್ಟು ಹೆಚ್ಚುವುದರಲ್ಲಿ ಸಂಶಯವಿಲ್ಲ.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಎಲ್ಲೆಲ್ಲಿ ಅವರ ಚರಣ ಧೂಳಿ ಬೀಳುತ್ತದೋ ಅದೆಲ್ಲ ಪವಿತ್ರವಾಗುತ್ತದೆ. ಈ ಬ್ರಾಹ್ಮಣರು ವೇದಮಯರು ಮತ್ತು ನಾನು ದೇವಮಯನು.

ಯಾರು ಈ ಬ್ರಾಹ್ಮಣರನ್ನು ಆರಾಧಿಸುತ್ತಾರೋ ಅವರು ನನ್ನನ್ನು ಆರಾಧಿಸಿದಂತೆ. ಯಾಕೆಂದರೆ ಬ್ರಾಹ್ಮಣರು ನನ್ನ ಆತ್ಮವಿದ್ದಂತೆ. ನಿಜ ಹೇಳಬೇಕೆಂದರೆ ಅವರು ನನಗೂ ಪೂಜ್ಯರು. ಅವರಿಗಿಂತ ಅಧಿಕವಾಗಿ ನಾನು ಯಾರನ್ನೂ ಪ್ರೀತಿಸುವುದಿಲ್ಲ. ಮೂರ್ಖರೂ, ದುಷ್ಟರೂ, ಆದ ಜನರು ಮಾತ್ರ ಬ್ರಾಹ್ಮಣರನ್ನೂ ನನ್ನನ್ನೂ ತಿರಸ್ಕರಿಸುತ್ತಾರೆ. ಆದುದರಿಂದ ಶ್ರುತದೇವನೇ, ನೀನು ಈ ಮುನಿಗಳನ್ನು ಪೂಜಿಸಿ ಧನ್ಯನಾಗಿರುವೆ." ಇದೇ ಮಾತನ್ನು ಭಗವಂತನು ಬಹುಲಾಶ್ವನಿಗೂ ಹೇಳಿದನು. ಇಬ್ಬರೂ ಭಗವಂತನನ್ನೂ, ಮುನಿಶ್ರೇಷ್ಠರನ್ನೂ ಆರಾಧಿಸಿ, ಭಗವನ್ಮಯರಾಗಿ ಜೀವನವನ್ನು ಸಾಗಿಸಿ ಕೊನೆಗೆ ಮುಕ್ತರಾದರು.

ಶ್ರೀಕೃಷ್ಣ ಲೀಲೆಗಳು ಅವನ ಮಹಿಮೆಯಂತೆ ಅಪಾರ. ವೇದೋಪನಿಷತ್ತುಗಳೇ ಅವನನ್ನು ಸ್ತುತಿಸುತ್ತಿವೆ ಎಂದ ಮೇಲೆ ಅವನ ಮಹಾತ್ಮೆ ಅಚಿಂತ್ಯವಲ್ಲವೇ? ಒಮ್ಮೆ ಸಾಕ್ಷಾತ್ ಭಗವಾನ್ ಶಂಕರನೇ ಅವನ ಭಕ್ತನಿಂದ ತೊಂದರೆಗೊಳಗಾದಾಗ ಶ್ರೀಹರಿಯು ಅವನನ್ನು ಪಾರು ಮಾಡಿದನು. ಆ ರೋಚಕ ಕಥೆ ಹೀಗಿದೆ.

ಪರಮೇಶ್ವರನು ಭೋಗಗಳನ್ನು ತ್ಯಜಿಸಿದ ವೈರಾಗ್ಯ ಮೂರ್ತಿಯಷ್ಟೆ? ಆದರೆ ಅವನ ಭಕ್ತರು ಧನಾಢ್ಯರೂ, ಭೋಗಭಾಗ್ಯಶಾಲಿಗಳೂ ಆಗುತ್ತಾರೆ. ಶ್ರೀಹರಿಯು ಶ್ರೀನಿವಾಸನು, ಸಕಲ ಭೋಗಾಶ್ರಯನು. ಆದರೆ ಅವನ ಭಕ್ತರು ದರಿದ್ರರೂ, ವಿರಾಗಿಗಳೂ ಆಗಿರುತ್ತಾರೆ!

ಭಗವಾನ್ ಶಂಕರನು ಮತ್ತಿತರ ದೇವತೆಗಳು ತಮ್ಮ ಭಕ್ತರಿಗೆ ಬೇಗನೆ ಒಲಿಯುತ್ತಾರೆ. ಅವರಿಗೆ ಭೋಗೈಶ್ವರ್ಯಗಳನ್ನು ಅನುಗ್ರಹಿಸಿ ಬಿಡುತ್ತಾರೆ. ಇದರಿಂದ ಅನೇಕ ಬಾರಿ ಅವರು ಸಂಕಷ್ಟಕ್ಕೊಳಗಾಗುತ್ತಾರೆ. ಬೇಗನೆ ಒಲಿಯುವಂತೆ ಬೇಗನೆ ಸಿಟ್ಟಿಗೆದ್ದು ಶಾಪವನ್ನೂ ಕೊಡುತ್ತಾರೆ. ಆದರೆ ಶ್ರೀಹರಿಯು ತನ್ನ ಭಕ್ತರಿಗೆ ಬೇಗನೆ ಒಲಿಯುವುದಿಲ್ಲ ಒಲಿದರೂ ಭಕ್ತರಲ್ಲಿರುವ ಭೋಗೈಶ್ವರ್ಯಗಳನ್ನು ಕಸಿದು ಕೊಳ್ಳುತ್ತಾನೆ. ಭಕ್ತರು ಧನಾದಿ ಸಂಪತ್ತನ್ನು ಪಡೆಯಲು ಪ್ರಯತ್ನಿಸಿದರೂ ಅವರಿಗೆ ಅದು ಸಿಗದಂತೆ ಮಾಡುತ್ತಾನೆ. ಕೊನೆಗೆ ಆ ಭಕ್ತರು ಸಂಪತ್ತಿನ ಆಸೆಯನ್ನು ತೊರೆದು ವೈರಾಗ್ಯವಂತರಾಗಿ ಭಗವಂತನನ್ನು ಅನನ್ಯ ಭಕ್ತಿಯಿಂದ ಭಜಿಸಲಾರಂಭಿಸುತ್ತಾರೆ. ಹೀಗೆ ಅವರು ಮೋಕ್ಷಾರ್ಹರಾಗಿ ಅಂತ್ಯದಲ್ಲಿ ಅನಂತನ



ಸಾನ್ನಿಧ್ಯವನ್ನು ಸೇರುತ್ತಾರೆ. ಶ್ರೀಮನ್ನಾರಾಯಣನಿಗೂ ಇತರ ದೇವತೆಗಳಿಗೂ ಇರುವ ವ್ಯತ್ಯಾಸವೇ ಇದು.

ಹಿಂದೆ ಶಕುನಿಯೆಂಬ ಅಸುರನ ಮಗ ವೃಕನೆಂಬನಿದ್ದನು. ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಯಾರನ್ನು ಆರಾಧಿಸಿದರೆ ಬೇಗನೆ ಪ್ರಸನ್ನರಾಗುತ್ತಾರೆ ಎಂಬುದು ತಿಳಿಯದೆ ಗೊಂದಲದಲ್ಲಿದ್ದನು. ಒಮ್ಮೆ ನಾರದರು ಸಿಕ್ಕಿದಾಗ ಅವರಲ್ಲಿ ತನ್ನ ಸಮಸ್ಯೆಯನ್ನು ನಿವೇದಿಸಿಕೊಂಡನು. ಅವರು ಭಗವಂತನಾದ ಶಂಕರನನ್ನು ಉಪಾಸಿಸಲು ಹೇಳಿದರು. ವೃಕಾಸುರನು ದೃಢ ಸಂಕಲ್ಪದಿಂದ ಕೇದಾರ ಕ್ಷೇತ್ರಕ್ಕೆ ಹೋದನು. ಅಲ್ಲಿ ಅಗ್ನಿಯನ್ನೇ ಶಿವನಮುಖವೆಂದು ಭಾವಿಸಿ ತನ್ನ ಮೈಯ ಮಾಂಸವನ್ನೇ ಸ್ವಲ್ಪಸ್ವಲ್ಪ ಕಡಿದು ಅದರಲ್ಲಿ ಆಹುತಿ ಕೊಡುತ್ತಾ ಬಂದನು. ಏಳು ದಿನಗಳಾದರೂ ಮಹಾದೇವನು ಪ್ರಸನ್ನನಾಗದಾಗ ಕೊನೆಗೆ ತನ್ನ ತಲೆಯನ್ನೇ ಆಹುತಿಕೊಡಲು ನಿರ್ಧರಿಸಿದರು. ಕೇದಾರ ತೀರ್ಥದಲ್ಲಿ ಸ್ನಾನಮಾಡಿ ಒದ್ದೆ ತಲೆಯನ್ನೇ ಕತ್ತಿಯಿಂದ ಕಡಿಯಲು ಹೋದನು. ಆಗ ಪರಮಕಾರುಣಿಕನಾದ ಕೈಲಾಸಪತಿಯು ಅಗ್ನಿಕುಂಡದಿಂದಲೇ ಅಗ್ನಿಯಂತೆ ಪ್ರಕಾಶಿಸುತ್ತಾ ಪ್ರಕಟವಾಗಿ ಅವನ ಕೈಗಳನ್ನು ಹಿಡಿದು ಕೊಂಡನು. ಪರಮಾತ್ಮನ ಸ್ಪರ್ಶಮಾತ್ರದಿಂದ ವೃಕನ ಶರೀರ ಮೊದಲಿನಂತೆ ಸ್ವಸ್ಥವಾಯಿತು. ಶಿವನೆಂದನು". ಪ್ರಿಯ ವೃಕನೇ, ಸಾಕು ಸಾಕು. ನೀನು ವರವನ್ನು ಕೇಳು. ನಾನು ಕೇವಲ ನೀರಿನ ಅಭಿಷೇಕದಿಂದ ಸಂತುಷ್ಟನಾಗುತ್ತೇನೆ. ನೀನೋ, ನಿನ್ನ ಶರೀರವನ್ನೇ ಕಳೆದುಕೊಳ್ಳಲು ಸಿದ್ಧನಾಗಿದ್ದೀಯಲ್ಲ"? ಆಗ ವೃಕನು ಲೋಕಭಯಂಕರವಾದ ವರವನ್ನು ಯಾಚಿಸಿದನು, "ಭಗವಂತ, ನಾನು ಯಾರ ತಲೆಯ ಮೇಲೆ ಕೈ ಇಡುವೆನೋ ಅವನು ಸುಟ್ಟು ಹೋಗಲಿ." ಶಂಕರನು ಇದರಿಂದ ಅಸಂತುಷ್ಟನಾದರೂ ತೋರಿಸಿಕೊಳ್ಳದೆ, "ಹಾಗೇ ಆಗಲಿ". ಎಂದನು ನಗುತ್ತ ವರವನ್ನು ಕೊಟ್ಟನು. ಆ ದುಷ್ಟನಿಗೆ ಪಾರ್ವತಿಯನ್ನೇ ಅಪಹರಿಸುವ ಆಸೆಯಾಯಿತು. ಆದರೆ ಶಿವನಿದ್ದರೆ ಅದಕ್ಕೆ ಅಡ್ಡಿ ಪಡಿಸುತ್ತಾನೆ. ಅದಕ್ಕೆ ಶಿವನ ತಲೆಯ ಮೇಲೆಯೇ ಕೈಯಿಡಲು ಮುಂದಾದನು. ಇದರಿಂದ ಭಗವಂತನು ಹೆದರಿದನು. ತನ್ನ ಕೆಲಸ ತನಗೇ ಮುಳುವಾಯಿತೆಂದು ಅಲ್ಲಿಂದ ಓಡಿದನು. ಸ್ವರ್ಗ, ಭೂಲೋಕ, ದಿಕ್ಕುಗಳ ಕೊನೆಯುವರೆಗೂ ಓಡಿದನು. ದೇವತೆಗಳೆಲ್ಲ ಅವನನ್ನು ಹೇಗೆ ಕಾಪಾಡುವುದೆಂದು ತಿಳಿಯದೆ ಸುಮ್ಮನೆ ನೋಡುತ್ತಾ ನಿಂತರು.

ಆಗ ಸದಾಶಿವನು ವೈಕುಂಠಕ್ಕೆ ಧಾವಿಸಿದನು. ಭಗವಂತನ ಈ ಸಂಕಷ್ಟವನ್ನು ದೂರದಿಂದಲೇ ವೀಕ್ಷಿಸಿದ ಶ್ರೀಮನ್ನಾರಾಯಣನು ತನ್ನ ಯೋಗಮಾಯೆಯ ಬಲದಿಂದ ಒಬ್ಬ ವಟುವಿನ ರೂಪವನ್ನು ಧರಿಸಿದನು. ಮೇಖಲೆ, ಅಜಿನ, ದಂಡ, ರುದ್ರಾಕ್ಷಮಾಲೆ, ದರ್ಭೆಗಳನ್ನು ಧರಿಸಿಕೊಂಡು ಅವನು ವಿನೀತನಾಗಿ ವೃಕಾಸುರನಿಗೆ ನಮಸ್ಕರಿಸಿ ಹೀಗೆಂದನು; ಶಕುನಿ ಪುತ್ರನೇ, ನೀನೇಕೆ ಇಲ್ಲಿಯವರೆಗೆ ಬಂದೆ? ನಿನ್ನ ದೇಹಕ್ಕೆ ಬಹಳ ಶ್ರಮವಾಗಿರಬಹುದು. (ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಕಡಂದಲೆ ಶ್ರೀಪತಿರಾವ್ ಅಧಿಕಾರಿ



ಮುಂಬೈಯ ಮೂಲುಂಡ್‌ನಲ್ಲಿ ವಾಸ್ತವ್ಯದಲ್ಲಿರುವ ಕಡಂದಲೆ ಶ್ರೀಪತಿ ರಾವ್ ಅಧಿಕಾರಿಯವರು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪತ್ರಿಕೆಗೆ ಸಹಾಯ ನೀಡಿದ್ದಾರೆ. ಕಾರ್ಕಳ ತಾಲೂಕು ಕಡಂದಲೆಯ ದಿವಂಗತ ಅಪ್ಪುರಾವ್ ಅಧಿಕಾರಿ ಹಾಗೂ ದಿವಂಗತ ಸೀತಮ್ಮ ದಂಪತಿಗಳ ನಾಲ್ವರು ಪುತ್ರರು ಹಾಗೂ ನಾಲ್ವರು ಪುತ್ರಿಯರಲ್ಲಿ ಏಳನೇಯವರಾದ ಶ್ರೀಪತಿರಾಯರು ಹುಟ್ಟೂರು ಕಡಂದಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದು ಅದಮಾರಿನ ಪೂರ್ಣಪ್ರಜ್ಞಾ ಪದವಿ ಪೂರ್ವ ಕಾಲೇಜಿನಲ್ಲಿ ಹೈಸ್ಕೂಲು ಶಿಕ್ಷಣ ಪಡೆದರು. 1965ರಲ್ಲಿ ಉದ್ಯೋಗಕ್ಕಾಗಿ ಮುಂಬೈ ಸೇರಿದರು. ಖಾಸಗೀ ಶಿಕ್ಷಣ ಪಡೆದ ಶ್ರೀಯುತರು ಅತುಲ್ ಫಾರ್ಮಾಸಿಟಿಕಲ್ಸ್‌ನಲ್ಲಿ ಉದ್ಯೋಗಕ್ಕೆ ಸೇರಿ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಸಂಸ್ಥೆಯಲ್ಲಿಸೇವೆ ಸಲ್ಲಿಸಿದರು. ನಂತರ ಸ್ವೇಚ್ಛಾ ನಿವೃತ್ತಿ ಪಡೆದು ಇನ್ನೋಟೆಕ್ ಕಂಪ್ಯೂಟರ್‌ನಲ್ಲಿ ಅಧಿಕಾರಿಯಾಗಿ ಹತ್ತು ವರ್ಷ ಕರ್ತವ್ಯ ನಿರ್ವಹಿಸಿದರು.

ಕಟಪಾಡಿ ಮಟ್ಟು ದಿವಂಗತ ನಾರಾಯಣರಾವ್ ಹಾಗೂ ದಿವಂಗತ ಶಾರದಮ್ಮ ದಂಪತಿಗಳ ಪುತ್ರಿ ಶ್ರೀಮತಿ ಗೀತಾ (ಸುನಂದಾ) ಎಸ್ ಅಧಿಕಾರಿಯವರನ್ನು ವಿವಾಹವಾಗಿರುವ ಇವರಿಗೆ ಓರ್ವ ಪುತ್ರ ಪ್ರಸಾದ್ ಅಧಿಕಾರಿ ಮತ್ತು ಓರ್ವ ಪುತ್ರಿ ಪ್ರಸೀದಾ (ಇಬ್ಬರೂ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಅಮೇರಿಕಾದಲ್ಲಿ ಉದ್ಯೋಗಿಗಳಾಗಿದ್ದಾರೆ.) ವಿವಾಹಿತರಾಗಿದ್ದು ವಿದೇಶದಲ್ಲಿ ನೆಲೆಸಿದ್ದಾರೆ.

ಶ್ರೀ ಶ್ರೀಪತಿರಾವ್ ಅಧಿಕಾರಿಯವರ ಈ ಕೊಡುಗೆಯನ್ನು ಶ್ರೀ ಶಾರದಾ ಬಳಗವು ಅನಂತ ಕೃತಜ್ಞತೆಗಳೊಂದಿಗೆ ಸ್ವೀಕರಿಸಿ . ಅವರಿಗೆ ಹಾಗೂ ಅವರ ಮನೆಯವರಿಗೆ ಇನ್ನೂ ಹೆಚ್ಚಿನ ಶ್ರೇಯಸ್ಸುಂಟಾಗಲಿ ಎಂದು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್, ಕುಡಾಲ್; ಎಸ್.ಆರ್.ಅಧಿಕಾರಿ ಮುಂಬೈ.

# ಚೆಂಡುಕಳ ಶ್ರೀ ಸೋಮನಾಥ ದೇವಸ್ಥಾನ

## ಕಿರುಪರಿಚಯ ಹಾಗೂ ಮನವಿ

ಕರ್ನಾಟಕ ಕೇರಳ ರಾಜ್ಯಗಳ ಗಡಿ ಭಾಗದಲ್ಲಿರುವ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಪುಟ್ಟ ಗ್ರಾಮದಲ್ಲಿ ಮಂಗಲ್ಪಾಡಿ. ಈ ಪುಟ್ಟ ಗ್ರಾಮದಲ್ಲಿ ಮೈ ಮನಗಳನ್ನು ತಂಪಾಗಿಸುವ ಸುಂದರ ಪರಿಸರದ ಮಧ್ಯೆ ತೋಟ-ಚೆರುಗೋಳಿಯಲ್ಲಿ ತನ್ನ ನೆಲೆಯನ್ನು ಕಂಡುಕೊಂಡವನೇ ಶ್ರೀ ಸೋಮನಾಥ ದೇವರು.

ಸರಿಸುಮಾರು ಅರವತ್ತು ವರ್ಷಗಳ ಹಿಂದೆ ಇಲ್ಲಿಯೇ ದೇವಸ್ಥಾನದ ಪಕ್ಕದಲ್ಲಿ ವಾಸ್ತವ್ಯವಿದ್ದ ದಿವಂಗತ ಚೆಂಡುಕಳ ಸೋಮನಾಥಯ್ಯ ಎಂಬ ದೈವಭಕ್ತ ಬ್ರಾಹ್ಮಣ ಕುಟುಂಬದವರು ತಮ್ಮ ಇಷ್ಟ ದೇವರಾದ ಶ್ರೀ ಸೋಮನಾಥನ ಕೈಂಕರ್ಯವನ್ನು ಮಾಡಿಕೊಂಡು ಬರುತ್ತಿದ್ದು, ಕ್ರಮೇಣ ಕುಟುಂಬದವರು ಉದ್ಯೋಗನಿಮಿತ್ತ ಅನಿವಾರ್ಯವಾಗಿ ಊರನ್ನು ಬಿಟ್ಟು ತೆರಳಬೇಕಾಗಿ ಬಂತು. ಆ ಕಾರಣದಿಂದ ಶ್ರೀ ದೇವರ ಕ್ರಮಬದ್ಧ ಪೂಜೆಯೂ ದೇವಸ್ಥಾನದಲ್ಲಿ ನಿಂತು ಹೋಯಿತು. ಸುಮಾರು 800 ವರ್ಷಗಳ ಐತಿಹ್ಯವನ್ನು ಹೊಂದಿರುವ ಈ ದೇವಸ್ಥಾನವು ಪಶ್ಚಿಮಾಭಿಮುಖವಾಗಿ ಇದ್ದು, ಹಿಂದೆ ಇದೇ ಕುಟುಂಬಕ್ಕೆ ಸೇರಿದ ಪೂರ್ವಜರಿಂದಲೇ ಸ್ಥಾಪಿಸಲ್ಪಟ್ಟು ಪೂಜಿಸಲ್ಪಡುತ್ತಿತ್ತು. ಹಿಂದೆ ರಾಜಾಶ್ರಯವನ್ನು ಹೊಂದಿದ್ದು ಜಾತ್ರೆ ಉತ್ಸವಾದಿಗಳಿಂದ ವೈಭವಯುತವಾಗಿ ಪೂಜೆಗೊಳ್ಳುತ್ತಿದ್ದ ದೇವರು ಶ್ರೀ ಸೋಮನಾಥ ಎಂಬುದು ದೈವ ಚಿಂತನೆಯಿಂದ ತಿಳಿದುಬಂದಿದೆ. ಇದರ ಹತ್ತಿರದಲ್ಲೇ ಇರುವ ಶ್ರೀ ಸದಾಶಿವ ದೇವಸ್ಥಾನವೂ ಈ ವಂಶಸ್ಥರಿಂದಲೇ ಸ್ಥಾಪಿಸಲ್ಪಟ್ಟದ್ದು ಕೆಲವು ವರ್ಷಗಳ ಹಿಂದೆ ಊರ ಭಕ್ತರಿಂದ ಜೀರ್ಣೋದ್ಧಾರಗೊಂಡು ಪೂಜೆ ಪುನಸ್ಕಾರಗಳು ಉತ್ತಮ ರೀತಿಯಲ್ಲಿ ನಡೆಯುತ್ತಿವೆ. ದೈವ ಚಿಂತನೆಯಲ್ಲಿ ಕಂಡುಬಂದ ಇನ್ನೂಂದು ಮಹತ್ತ್ವದ ವಿಷಯವೆಂದರೆ ಶ್ರೀ ಸೋಮನಾಥ ದೇವಸ್ಥಾನದಲ್ಲಿ ಶಿವನು ಶ್ರೀದೇವಿಯ ಸಾಮಿಪ್ಯವನ್ನೂ ಹೊಂದಿದ್ದು ಪಾರ್ವತೀ ಪರಮೇಶ್ವರನಾಗಿದ್ದಾನೆ ಎಂಬುದು. ಈ ಕ್ಷೇತ್ರದಲ್ಲಿ ಗಣಪತಿ, ವಿಷ್ಣು (ನಾಗ) ಹಾಗೂ ಇತರ ದೈವಗಳ ಸಾನಿಧ್ಯವೂ ಇದೆ ಎಂಬುದಾಗಿಯೂ ತಿಳಿದುಬಂದಿದೆ. ಸುಮಾರು ನಾಲ್ಕುನೂರು ಮುಡಿ ಹುಟ್ಟುವಳಿಯ ಶ್ರೀಮಂತಿಕೆಯನ್ನು ಹೊಂದಿದ್ದು ಕ್ರಮೇಣ ಸರಕಾರದ ವಶಹೊಂದಿ ತಸ್ತೀಕನ್ನು ಪಡೆಯುತ್ತಿದ್ದುದು ಸರಕಾರೀ ದಾಖಲೆಗಳಿಂದ ಕಂಡುಬಂದಿದೆ.

ಸದ್ಯದಲ್ಲೇ ಈ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಪ್ರಾರಂಭವಾಗಲಿದ್ದು, ಶ್ರೀ ದೇವರ ಬಾಲಾಲಯ ಪ್ರತಿಷ್ಠೆಯು ಜೂನ್ ತಿಂಗಳ 9 ಮತ್ತು 10ನೇ ದಿನಾಂಕದಂದು ಈ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆದಿರುವುದು.

ಈ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹವನ್ನು ಪಡೆದುಕೊಂಡುಬಂದು ಇಡಲಾದ ಸ್ಥಳ ಪ್ರಶ್ನೆಯಲ್ಲಿ ಚೆಂಡುಕಳ ಕುಟುಂಬವು ಮೂಲತಃ ಉಬರಳೆಗೆ ಸೇರಿದ್ದು ಮುಂದಿನ ಎಲ್ಲಾ ದೇವತಾ ಕಾರ್ಯಗಳನ್ನೂ ಒಟ್ಟಾಗಿಮಾಡುವಂತೆ ತಿಳಿಸಲಾಗಿದೆ.

ಒಂದು ಕಾಲದಲ್ಲಿ ಈ ಪರಿಸರ ಭಕ್ತರ ಅಭೀಷ್ಟಗಳನ್ನು ಈಡೇರಿಸಿ ಹರಸಿದ ಶ್ರೀ ಸೋಮನಾಥ ದೇವರು 'ಕಾಲದ ಏರಿಳಿತ ದೇವರನ್ನೂ ಬಿಟ್ಟಿಲ್ಲ' ಎಂಬುದನ್ನು ಶ್ರುತಪಡಿಸಲೋಸುಗವೋ ಎಂಬಂತೆ ನಲ್ವತ್ತು ವರ್ಷಗಳ ನಂತರ ಈಗ ಮತ್ತೊಮ್ಮೆ ಭಕ್ತರಿಂದ ಪೂಜೆಯನ್ನು ಪಡೆಯಲು ನಿಶ್ಚಯಿಸಿರುವುದು ನಮಗೆಲ್ಲರಿಗೂ ಸಂತೋಷದ ವಿಚಾರ.

ಇದನ್ನು ಸಾಕಾರಗೊಳಿಸಲು ಊರ-ಪರವೂರ ಮುಖ್ಯವಾಗಿ ಚೆಂಡುಕಳ ಮತ್ತು ಉಬರಳೆ ಕುಟುಂಬಕ್ಕೆ ಸೇರಿದ ಸದಸ್ಯರಿಂದ, ಸಹೃದಯೀ ನಮ್ಮ ಸಮಾಜ ಬಾಂಧವರಿಂದ ಮತ್ತು ಸಾರ್ವಜನಿಕರಿಂದ ತನು ಮನ ಧನಗಳ ಉದಾರ ಸಹಾಯದ ಅಗತ್ಯವಿದೆ. ತನ್ಮೂಲಕ ಶ್ರೀದೇವರು ನವ್ಯ ಭವ್ಯ ಆದರೆ ಪ್ರಾಚೀನ ಪರಂಪರೆಗೆ ಯಾವುದೇ ಚ್ಯುತಿಬಾರದಂತೆ ಗರ್ಭಗುಡಿ, ನಮಸ್ಕಾರ ಮಂಟಪ, ದೈವ ದೇವರುಗಳ ಪುನಃ ಪ್ರತಿಷ್ಠೆ, ಪಾಕ ಶಾಲೆ, ಸುತ್ತಲಿನ ಪೌಳಿ, ಬಾವಿ, ಕೆರೆಗಳ ನವೀಕರಣ ಇತ್ಯಾದಿ ಕೆಲಸಗಳನ್ನು ಆದ್ಯತೆಗನುಸಾರವಾಗಿ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ.

ಶ್ರೀ ಕರುಣ್ ರಾವ್ ಬೆಳ್ಳೆ ಸಂಚಾಲಕರಾಗಿರುವ ಜೀರ್ಣೋದ್ಧಾರ ಸಮಿತಿಯಲ್ಲಿ ಶ್ರೀದಾಮೋದರ ಉಬರಳೆ ಅಧ್ಯಕ್ಷರಾಗಿ, ಶ್ರೀ ಡಾ। ಚೆಂಡುಕಳ ರಮೇಶ್ ರಾವ್ ಗೌರವ ಅಧ್ಯಕ್ಷರಾಗಿ, ಶ್ರೀ ಸುಬ್ರಹ್ಮಣ್ಯ ಉಬರಳೆ ಕಾರ್ಯದರ್ಶಿಯಾಗಿ, ಶ್ರೀ ಶಿರಿಯ ಜಯರಾಮ ಜೋಶಿ ಖಜಾಂಚಿಯಾಗಿ, ಶ್ರೀ ಶ್ರೀನಿವಾಸರಾವ್ ಪಡುಮಲೆ ಗೌರವ ಲೆಕ್ಕಪತ್ರ ಪರಿಶೋಧಕರಾಗಿ ಆಯ್ಕೆಯಾಗಿದ್ದಾರೆ. ಸಮಾಜಬಾಂಧವರು ಸರ್ವವಿಧದ ಸಹಕಾರವನ್ನು ನೀಡುವ ಮೂಲಕ ಶ್ರೀದೇವರ ಕೃಪೆಗೆ ಪಾತ್ರರಾಗಬೇಕೆಂದು ಜೀರ್ಣೋದ್ಧಾರ ಸಮಿತಿ ಅಪೇಕ್ಷಿಸುತ್ತದೆ.

ವರದಿ : **ಡಾ। ಚೆಂಡುಕಳ ರಮೇಶ್ ರಾವ್**

## ಶ್ರೀ ಸೋಮನಾಥ ದೇವಸ್ಥಾನದಲ್ಲಿ ಬಾಲಾಲಯ ಸ್ಥಾಪನೆ

ಕಾಸರಗೋಡು ತೋಟ, ಚೆರುಗೋಳಿ, ಮಂಗಲ್ಪಾಡಿಯ ಶ್ರೀ ಸೋಮನಾಥ ದೇವಸ್ಥಾನದಲ್ಲಿ ಶೃಂಗೇರಿ ಪೀಠಾಧೀಶ್ವರ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಪರಮಾನುಗ್ರಹದಿಂದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಜೂನ್ ತಿಂಗಳ 9 ಮತ್ತು 10ನೇ ತಾರೀಕಿನಂದು ಶ್ರೀದೇವರಿಗೆ ಅನುಜ್ಞಾಕಲಶಾಭಿಷೇಕ, ಬಾಲಾಲಯ ಪ್ರತಿಷ್ಠೆ, ನಿಧಿ ಕುಂಭ ಸಮರ್ಪಣೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿತು. ಜೀರ್ಣೋದ್ಧಾರ ಸಮಿತಿಯ ಸದಸ್ಯರು ಹಾಗೂ ಸಮಾಜ ಬಾಂಧವರು, ಊರ ಪ್ರಮುಖರು ಸೇರಿದ್ದ ಈ ಸಮಾರಂಭದಲ್ಲಿ ಮುಂದಿನ ಜೀರ್ಣೋದ್ಧಾರ ಕಾರ್ಯಕ್ಕಾಗಿ ತನು-ಮನ-ಧನಗಳಿಂದ ಸಹಕಾರ ನೀಡಬೇಕೆಂದು ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು ವಿನಂತಿಸಿಕೊಂಡಿದ್ದಾರೆ.


ಓಂ ಶ್ರೀ ಸಾಯಿ ರಾಂ

**ವೈವಾಹಿಕ ಜೀವನದ 35ನೇ ಸಂವಸ್ಸರಗಳನ್ನು ಪೂರೈಸಿದಕ್ಕೆ ಶುಭಾಶಯಗಳು**



**ಶ್ರೀ ಮಾಂಟ್ರಾಡಿ ಮೋಹನ್ ರಾವ್ ಮತ್ತು ಶ್ರೀಮತಿ ಕಬ್ಯಾಡಿ ಸವಿತಾ ರಾವ್**

ಶ್ರೀ ಸಾಯಿ ಕೃಪಾ ನಿಲಯಂ, ಪಾದೆಕಲ್ಲು ಲೇಔಟ್, ಕಕ್ಕುಂಜೆ, ಅಂಚೆ ಕುಂಜಿಬೆಟ್ಟು,
ಉಡುಪಿ 576102 ದೂರವಾಣಿ 2580001

**ವೈವಾಹಿಕ ಜೀವನದ 35ನೇ ಸಂವತ್ಸರಗಳನ್ನು ಪೂರೈಸಿದ
ಈ ಸಂದರ್ಭದಲ್ಲಿ ನಿಮಗೆ ಇನ್ನೂ ಹೆಚ್ಚಿನ ಸುಖ-ಸಂಪತ್ತು-ಆರೋಗ್ಯವನ್ನು
ದೇವರು ಅನುಗ್ರಹಿಸಲಿ ಎಂದು ಬಯಸುವ,**

ಡಾ (ಶ್ರೀಮತಿ) ಪ್ರಶಾಂತಿ ಮತ್ತು ಶ್ರೀ.ಬಿ.ಎನ್ ವಾದಿರಾಜನ್, ಕಾರ್‌ಘರ್, ನವಿ ಮುಂಬಾಯಿ, ಮತ್ತು ಮೊಮ್ಮಗಳು ಹವನ
ಶ್ರೀಮತಿ ಪ್ರಥ್ವಿ ಮತ್ತು ಶ್ರೀ ಬಳ್ಳಮಂಜ ಎಸ್. ಸುರೇಶ್ ರಾವ್, ರಾಜಾಜಿನಗರ, ಬೆಂಗಳೂರು ಮತ್ತು
ಮೊಮ್ಮಗ ಸೃಜನ್ ರಾವ್, ಸಾಯಿಕಿರಣ್ ದಾಸ್.
ಮಾಂಟ್ರಾಡಿ ಶ್ರೀಮತಿ ಲೀಲಾವತಿ ಅನಂತಕೃಷ್ಣ ರಾವ್ ಮಕ್ಕಳು ಮತ್ತು ಮೊಮ್ಮಕ್ಕಳು, ಉಡುಪಿ.
ಶ್ರೀಮತಿ ಸರೋಜಿನಿ ಸುಬ್ರಹ್ಮಣ್ಯ ಸ್ವಾಮಿ ಮಕ್ಕಳು ಮತ್ತು ಮೊಮ್ಮಕ್ಕಳು, ಉಡುಪಿ
ಶ್ರೀಮತಿ ಭಾರತಿ ಕುಮಾರಸ್ವಾಮಿ ಅಣ್ಣಾನಗರ ಚೆನ್ನೈ, ಮಗಳು ಅಳಿಯ ಮತ್ತು ಮೊಮ್ಮಗಳು.
ಶ್ರೀಮತಿ ಐ.ಕೆ. ಪ್ರಭಾವತಿ ಸದಾಶಿವ ರಾವ್, ಆರ್.ಕೆ. ನಗರ, ಚೆನ್ನೈ, ಮಕ್ಕಳು ಮತ್ತು ಮೊಮ್ಮಕಳು
ಮಾಂಟ್ರಾಡಿ ಶ್ರೀ ಶಶಿಕಾಂತ ರಾವ್ ಮತ್ತು ಶ್ರೀಮತಿ ಶೋಭಾ ಎಸ್.ರಾವ್, ದೊಡ್ಡಣಗುಡ್ಡೆ, ಉಡುಪಿ, ಮಕ್ಕಳು ಮತ್ತು ಮೊಮ್ಮಕ್ಕಳು.
ಶ್ರೀ ರಾಜೇಂದ್ರ ಪ್ರಸಾದ್ ಮತ್ತು ಶ್ರೀಮತಿ ಅನುಪಮ ರಾವ್ ಬಸವೇಶ್ವರ ನಗರ, ಬೆಂಗಳೂರು ಮಕ್ಕಳು ಮತ್ತು ಮೊಮ್ಮಗಳು.
ಶ್ರೀ ಶ್ರೀಕಾಂತ ರಾವ್ ಮತ್ತು ಶ್ರೀಮತಿ ಗೀತಾ ರಾವ್ ಮಡಗಾಂ ಗೋವಾ ಮಕ್ಕಳು ಮತ್ತು ಮೊಮ್ಮಗಳು
ಶ್ರೀಮತಿ ಪಿ.ಬಿ. ಗೀತಾ ಸುಬ್ರಮಣ್ಯ ರಾವ್, ಬಿ.ಟಿ.ಎಂ. ಲೇಔಟ್ ಬೆಂಗಳೂರು ಮತ್ತು ಮಗಳು ಸ್ವಪ್ನಾ



**ಹಾರ್ದಿಕ ಅಭಿನಂದನೆಗಳು**



**ಕು। ಮೇಧಾ ಬಿ.**

ಉಡುಪಿಯ ಶ್ರೀಮತಿ ಅನುರಾಧಾ ಮತ್ತು ಶ್ರೀ ಉದಯ ಬಿ.ಇವರ ಪುತ್ರಿಯೊದ ಕುಮಾರಿ ಮೇಧಾ ಬಿ. ಇವಳು ಪ್ರಸಕ್ತ ಶೈಕ್ಷಣಿಕ ವರ್ಷದ ಹನ್ನೆರಡನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಿದ ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಶೇ.95 ಅಂಕದೊಂದಿಗೆ ಉತ್ತಮ ದರ್ಜೆ ಪಡೆದು ಶೈಕ್ಷಣಿಕವಾಗಿ ಗಮನಾರ್ಹ ಸಾಧನೆ ಮಾಡಿದ್ದಾಳೆ. ಈಕೆ ಬ್ರಹ್ಮಾವರದ ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್‌ನ ವಿದ್ಯಾರ್ಥಿನಿ. 2011ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ 10ರಲ್ಲಿ 10 ಅಂಕ ಪಡೆದಿದ್ದಳು. ಇವಳ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸುವ,

**ಅಜ್ಜ-ಬ್ರಹ್ಮಾವರ ನಾರಾಯಣ ರಾವ್, ಉಡುಪಿ
ಅಜ್ಜಿ-ಪದ್ಮಾಕ್ಷಿ ನಾರಾಯಣ ರಾವ್
ಮಾವ-ಅನಿಲ್‌ಕುಮಾರ್**

## ........ಶ್ರೀ ಶಂಕರ ಜಯಂತ್ಯುತ್ಸವ ಆಚರಣೆ

(....1ನೇ ಪುಟದಿಂದ)

ಪೂಜೆ ಪ್ರಾರ್ಥನೆ ಮಾಡುವಾಗ ನಾವು ಪ್ರಾಂಜಲ ಮನಸ್ಸಿನಿಂದ ಮಾಡಬೇಕು. ಶ್ರೀ ಶಂಕರಾಚಾರ್ಯರು ತಮ್ಮ ಅಲ್ಪಕಾಲಾವಧಿಯಲ್ಲಿ ಅಗಾದ ಕಾರ್ಯವೆಸಗಿದ್ದಾರೆ. ಮೂವತ್ತೆರಡು ವರ್ಷಗಳಲ್ಲಿ ಮೂರು ಸಾವಿರ ವರ್ಷಗಳಲ್ಲಿ ಅವರು ಮಾಡಬಹುದಾದ ಸಾಧನೆ ಮಾಡಿದ್ದಾರೆ" ಎಂದು ಯಾಜಿ ಪಾವಂಜೆ ನಿರಂಜನ ಭಟ್ ನುಡಿದರು.

ಶ್ರೀಯುತರು ಕಾರ್ಕಳ ಶ್ರೀ ಶಂಕರ ಪತಿಷ್ಠಾನದ ವತಿಯಿಂದ, ಪ್ರತಿಷ್ಠಾನದ ಮಾಜಿ ಅಧ್ಯಕ್ಷ ಶ್ರೀ ಶುಂಠಿಪಾಡಿ ವಿ.ಮನೋಹರರಾಯರ ಮನೆ "ವಾಸುಕಿ"ಯಲ್ಲಿ ನಡೆದ ಶ್ರೀ ಶಂಕರ ಜಯಂತಿ ಕಾರ್ಯಕ್ರಮದಲ್ಲಿ ಕು| ಅನುರಾಧಳ ಕಾವ್ಯವಾಚನಕ್ಕೆ ಪ್ರವಚನ ನೀಡಿ ಮಾತನಾಡುತ್ತಿದ್ದರು. ಸಭಾ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ನೂತನ ಕಾರ್ಯಕ್ರಮಕ್ಕೆ ಶ್ರೀ ಹರಿಶ್ಚಂದ್ರ ರಾವ್ ಕರ್ವಾಲು ತಬಲ ಹಾಗೂ ಶ್ರೀ ಸದಾಶಿವ ರಾವ್ ತೆಳ್ಳಾರು ಹಾರ್ಮೋನಿಯಂನಲ್ಲಿ ಸಹಕರಿಸಿದ್ದರು.

### ಮಂಗಳೂರಿನಲ್ಲಿ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಇತ್ತೀಚೆಗೆ 'ಶಂಕರಜಯಂತಿ' ಯನ್ನು ಶ್ರದ್ಧೆ ಹಾಗೂ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಮೊದಲಿಗೆ ಸಾಮೂಹಿಕ ಲಲಿತಸಹಸ್ರನಾಮ, ವಿಷ್ಣು ಸಹಸ್ರನಾಮ, ಶ್ರೀಶಂಕರಾಚಾರ್ಯ ಅಷ್ಟೋತ್ತರ ಪಾರಾಯಣಗಳು ನಡೆದು ಶ್ರೀ ದುರ್ಗಾ ನಮಸ್ಕಾರ ಪೂಜೆ ಪ್ರಾರಂಭಗೊಂಡಿತು. ನಂತರ ನಡೆದಧಾರ್ಮಿಕ ಉಪನ್ಯಾಸದಲ್ಲಿ ಶ್ರೀ ಎಂ. ಆರ್. ವಾಸುದೇವ, ಅಧ್ಯಕ್ಷರು ಜಿಲ್ಲಾ ಶಂಕರಜಯಂತಿ ಸಮಿತಿ, ಮಾತನಾಡುತ್ತಾ ಭಗವಾನ್ ಬುದ್ಧ, ಶಂಕರಾಚಾರ್ಯರು ಹಾಗೂ ವಿವೇಕಾನಂದರು ಹೇಗೆ ತಮ್ಮ



ಅಧ್ಯಕ್ಷರಾದ ಶ್ರೀ ನಿಟ್ಟೆ ಮುರಲೀಧರ ಶರ್ಮ ಎಲ್ಲರನ್ನೂ ಸ್ವಾಗತಿಸಿದರು. ಸ್ಥಾನಿಕ ಮಹಾ ಮಂಡಲದ ವತಿಯಿಂದ ಶ್ರೀ ಜಗನ್ನಿವಾಸ ರಾವ್ ಪುತ್ತೂರು ಹಾಗೂ ಕಡಬ ಗೋಪಾಲಕೃಷ್ಣ ರಾವ್ ಮಹಾಮಂಡಲದ ಉದ್ದೇಶಗಳ ಬಗೆಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಶಂಕರ ಪ್ರತಿಷ್ಠಾನದ ವತಿಯಿಂದ ಅಧ್ಯಕ್ಷರು ಹತ್ತು ಸಾವಿರ ರೂಪಾಯಿಗಳ ಚೆಕ್ಕನ್ನು ಮಹಾಮಂಡಲಕ್ಕೆ ನೀಡಿದರು.


ನಂತರ ತಮ್ಮ 83ನೇ ಜನ್ಮದಿನದ ಸಿಹಿ ವಿತರಿಸಿ ಹಿರಿಯ ಚೇತನ ಶ್ರೀ ಸೂರ್ಯನಾರಾಯಣ ದಂಪತಿಗಳನ್ನು ಪ್ರತಿಷ್ಠಾನದವತಿಯಿಂದ ಸನ್ಮಾನಿಸಲಾಯಿತು. ಪ್ರತಿಷ್ಠಾನದ ಮಹಿಳಾ ವಿಭಾಗದ ನೂತನ ಅಧ್ಯಕ್ಷೆ ಶ್ರೀಮತಿ ಸಾವಿತ್ರಿ ಮನೋಹರರು ನಿರ್ವಹಿಸಿದ ಕಾರ್ಯಕ್ರಮದ ಕೊನೆಯಲ್ಲಿ ಪ್ರತಿಷ್ಠಾನದ ನೂತನ ಕಾರ್ಯದರ್ಶಿ ಶ್ರೀ ನಕ್ರೆ ಶಿವರಾಯರು, ವಂದಿಸಿದರು. ಭಜನಾ

ತತ್ವಗಳನ್ನು ಪ್ರತಿಪಾದಿಸಿದರು ಎಂದು ವಿವರಿಸಿದರು.ಶಂಕರಾಚಾರ್ಯರ"ಅಹಂ ಬ್ರಹ್ಮಾಸ್ಮಿ"ಎನ್ನುವುದನ್ನು ನಮ್ಮಜೀವನದಲ್ಲಿ ಅಳವಡಿಸಿಕೊಂಡರೆ ಶಂಕರ ಜಯಂತಿ ಆಚರಣೆಗೆ ಸಾರ್ಥಕತೆ ಬರುತ್ತದೆ ಎಂದರು.ಜಗದ್ಗುರು ಶ್ರೀಶ್ರೀ ಭಾರತೀ ತೀರ್ಥ ಸ್ವಾಮಿಗಳಿಂದ ಆಶೀರ್ವಚಿಸಲ್ಪಟ್ಟ, ಶೃಂಗೇರಿ ಮಠದ ಮುದ್ರೆಯನ್ನು ಹೊಂದಿರುವ ಶಾಲು ಹಾಗೂ ಸ್ಮರಣಿಕೆಗಳನ್ನು ಶ್ರೀ ಸಭಾದ ಉಪಾಧ್ಯಕ್ಷರಾದ ಶ್ರೀ ಎ.ಪಿ. ಕೃಷ್ಣರವರು ಶ್ರೀ ಎಂ. ಆರ್. ವಾಸುದೇವರಿಗೆ ನೀಡಿ ಅಭಿನಂದಿಸಿದರು. "ಸದನದ ಕಲಾವಿದರ"ಕುಣಿತಭಜನೆ, ಮಂಗಳಾರತಿ ಪ್ರಸಾದ ವಿತರಣೆಯೊಂದಿಗೆಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ಪಿ. ಶ್ರೀಕಾಂತ್‌ರವರು ಕಾರ್ಯಕ್ರಮ ನಿರ್ವಹಿಸಿ ಶ್ರಿ ಬಿ. ಎಸ್. ಅನಿಲ್ ರಾವ್ ಕಾರ್ಯಕ್ರಮ ಸಂಯೋಜಿಸಿದರು.

# ಉಡುಪಿಯಲ್ಲಿ ಸಾಮೂಹಿಕ ಉಪನಯನ

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ದಿನಾಂ15-05-2013ರಂದು ಶಂಕರಜಯಂತಿ ಪ್ರಯುಕ್ತ ಸಾಮೂಹಿಕ ಉಪನಯನವನ್ನು ಹಮ್ಮಿಕೊಳ್ಳಲಾಗಿತ್ತು. ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಶ್ರೀ ರವಿಉಪಾಧ್ಯಾಯ ಹಾಗೂ ಶ್ರೀ ಕೃಷ್ಣ ಭಟ್ ಇವರ ಪೌರೋಹಿತ್ಯದಲ್ಲಿ ಸಮಾಜದ ಇಬ್ಬರು ವಟುಗಳಿಗೆ ಬೆಳಿಗ್ಗೆ ಸುಮೂರ್ತದಲ್ಲಿ ಬ್ರಹ್ಮೋಪದೇಶ ನೀಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಪ್ರಮುಲ್ಲಚಂದ್ರರಾವ್, ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಕೋಶಾಧಿಕಾರಿ ಶ್ರೀ ಕೃಷ್ಣಮೂರ್ತಿರಾವ್ ಪದಾಧಿಕಾರಿಗಳು, ಕಾರ್ಯಕಾರಿಸಮಿತಿಯ ಸದಸ್ಯರು ಉಪಸ್ಥಿತರಿದ್ದು ವಟುಗಳನ್ನು ಆಶೀರ್ವಚಿಸಿದರು. ನಂತರ ಬ್ರಾಹ್ಮಣಸುಹಾಸಿನೀ ಆರಾದನೆಯೂ ನೆರವೇರಿತು.

# ಪಡುಬಿದ್ರಿ- ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ನಡೆದ 'ನರಸಿಂಹ ಜಯಂತಿ'



ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿದೇವಸ್ಥಾನದಲ್ಲಿ ದಿನಾಂಕ. 23-05-2013ನೇ ಗುರುವಾರ ನರಸಿಂಹ ಜಯಂತಿಯನ್ನು ಆಚರಿಸಲಾಯಿತು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಕಲಶಾಭಿಷೇಕವು ಸಂಪನ್ನಗೊಂಡಿತು. ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಮಹಿಳಾ ವೇದಿಕೆಯ ಸದಸ್ಯರಿಂದ ಶ್ರೀ ವಿಷ್ಣು ಸಹಸ್ರನಾಮ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ಮಹಾಪೂಜೆಯ ಬಳಿಕ ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಶ್ರೀ ದೇವರಿಗೆ ರಂಗಪೂಜೆಯು ಸುಸಂಪನ್ನಗೊಂಡಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ನಮ್ಮ ಸಮಾಜ ಬಾಂಧವರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ವರದಿ: ಸೀತಾದೇವಿ ಬಾಸ್ಕರ್ ರಾವ್

# ಕಾರ್ಕಳ ರೋಟರಿ ಅಧ್ಯಕ್ಷರಾಗಿ ಶ್ರೀಮತಿ ಜ್ಯೋತಿ ಪದ್ಮನಾಭ ಆಯ್ಕೆ




ಕಾರ್ಕಳ ರೋಟರಿಯ 2013-14ನೇ ಸಾಲಿನ ಅಧ್ಯಕ್ಷರಾಗಿ ಶ್ರೀಮತಿ ಜ್ಯೋತಿ ಪದನಾಭ ಅವರು ಆಯ್ಕೆಯಾಗಿದ್ದಾರೆ. 5 ವರ್ಷಗಳಿಂದ ಸಕ್ರಿಯವಾಗಿ ರೋಟರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರನ್ನು ಕಾರ್ಕಳ ರೋಟರಿಯು ತನ್ನ ಬೆಳ್ಳಿ ಹಬ್ಬದ ವರ್ಷಾಚರಣೆಯ ಸುಸಂದರ್ಭದಲ್ಲಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಇವರು 10 ವರ್ಷಗಳಿಂದ ಕೆ.ಎಂ.ಇ.ಎಸ್. ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಚಾರ್ಯರಾಗಿ ದುಡಿದು ಕಳೆದ ವರ್ಷ ಕಾರ್ಕಳದ ಪ್ರತಿಷ್ಠಿತ ''ಜ್ಞಾನಸುಧಾ'' ಪಿ.ಯು. ಕಾಲೇಜಿನ 'ಸಾರ್ವಜನಿಕ ಸಂಪರ್ಕ ಅಧಿಕಾರಿ'ಯಾಗಿ ನೇಮಕಗೊಂಡರು. ಕಾರ್ಕಳದಲ್ಲಿ ಎಲ್‌ಐಸಿ ಲೆಕ್ಕಾಧಿಕಾರಿಯಾಗಿರುವ ಶ್ರೀ ಪದ್ಮನಾಭ ಭಂಡಿ ಅವರ ಧರ್ಮಪತ್ನಿಯಾಗಿರುವ ಶ್ರೀಮತಿ ಜ್ಯೋತಿಯವರು ಜುಲೈ 10ರಂದು ರೋಟರಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

# ವಿವಾಹ ಸುವರ್ಣ ಮಹೋತ್ಸವ

ಶ್ರೀ.ಯು.ರಾಮಣ್ಣ ಹೆಬ್ಬಾರ್ ಮತ್ತು ವಿಜಯ ಆರ್.ಹೆಬ್ಬಾರ್ ತಾ.13-05-1963 ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟ ಇವರ ಸುಮಧುರ ವೈವಾಹಿಕ ಜೀವನದ ಸುವರ್ಣ ಮಹೋತ್ಸವವನ್ನು ತಾ.12-05-2013 ರಂದು ಅಂಬಲಪಾಡಿ 'ಶ್ರೀ ಲಕ್ಷ್ಮೀ ಜನಾರ್ಧನ ಮಹಾಕಾಳಿ' ದೇವಸ್ಥಾನದಲ್ಲಿ ಚಂಡಿಕಾಯಾಗದ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಎಲ್ಲೂರು (ಅದಮಾರು) ವೈ.ಯಂ. ಶ್ರೀಧರ್‌ರಾವ್ ಮತ್ತು ಅವರ ಪತ್ನಿ ಶ್ರೀಮತಿ ಪದ್ಮಾವತಿಯಮ್ಮನವರನ್ನು ದಂಪತಿ ಪೂಜೆ ಮಾಡಿ ಗೌರವಿಸಲಾಯಿತು. ಕಳಸ ಕಡಮಕ್ಕಿ ಶ್ರೀಯುತ ಸೀತಾರಾಮ ಮತ್ತು ಶ್ರೀಮತಿ ಉಮಾ ಸೀತಾರಾಮರ ಪುತ್ರಿ ರಕ್ಷತ ಇವಳಿಗೆ ಕನ್ನಿಕಾ ಪೂಜೆ ಮಾಡಿದರು. ಶ್ರೀ ದೇವಿಗೆ ಮಂಗಳಾರತಿ ಯಾಯಿತು ಮಂಗಳಾರತಿಯ ನಂತರ ದೇವಸ್ಥಾನದ ಧರ್ಮದರ್ಶಿ ಶ್ರೀಯುತ ಡಾ|ವಿಜಯ ಬಲ್ಲಾಳರು ಆಶೀರ್ವಾದ ಮಾಡುತ್ತಾ ಅಕ್ಷಯ ತದಿಗೆ ದಿನ ವಿವಾಹ ಮಹೋತ್ಸವ ಆಚರಿಸುವ ದಂಪತಿಯವರಿಗೆ ದೇವರಿಗೆ ಹಾಕಿದ ಹೂ ಮಾಲೆಯನ್ನು ತರಿಸಿ ದಂಪತಿಯವರ ಕೈಗೆ ಕೊಟ್ಟು ಹಾರ ವಿನಿಮಯ ಮಾಡಿಸಿದರು. ಚಂಡಿಕಾ ಯಾಗದ ಪ್ರಸಾದ ಭೋಜನದ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಫಲದಾನ ಮತ್ತು ದಕ್ಷಿಣೆ ನೀಡಲಾಯಿತು. ಬಂಧುಗಳು ದಂಪತಿಯವರಿಗೆ ಶುಭ ಹಾರೈಸಿದರು.

# ಕನ್ನಡ ಕವಿಕಾವ್ಯ ಪರಿಚಯ-೭ : ಆದಿಕವಿ ಪಂಪ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

"ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ" ಎಂದು ಕವಿಪಂಪನನ್ನು ಕುರಿತು 'ಪುಣ್ಯಾಸ್ರವ' ಎಂಬ ಗ್ರಂಥವನ್ನು ಬರೆದ ಕವಿ ನಾಗರಾಜನು ಹೇಳಿರುವನು. ಈ ಮಾತು ಅಕ್ಷರಶ: ಸತ್ಯ ಪಂಪನಿಗಿಂತ ಮೊದಲು ಕನ್ನಡದಲ್ಲಿ ಗ್ರಂಥ ರಚನೆ ಮಾಡಿದವರಿದ್ದರೂ ಪಂಪನನ್ನೇ ಕನ್ನಡದ ಆದಿಕವಿ ಎನ್ನಲಾಗುತ್ತದೆ. ಆವನು ಮಹಾಕವಿಯೂ ಹೌದು. ರಾಜಕೀಯ, ಸಾಮಾಜಿಕ,ಧಾರ್ಮಿಕ ಮತ್ತು ಸಾಹಿತ್ಯಿಕ ದೃಷ್ಟಿಯಿಂದ ಕ್ರಿ.ಶ. ಹತ್ತನೆಯ ಶತಮಾನವು ದಕ್ಷಿಣ ಭಾರತದಲ್ಲಿ ಐತಿಹಾಸಿಕ ಪರಿವರ್ತನೆಗಳು ನಡೆದ ಮಹತ್ವದ ಕಾಲ ಇಂತಹ ಕಾಲದಲ್ಲಿ. ಕನ್ನಡ ನಾಡನ್ನಾಳಿದ ಅನೇಕ ದೊರೆಗಳು ಸಾಹಿತ್ಯ,ಸಂಸ್ಕೃತಿ, ಕಲೆಗಳಿಗೆ ಪ್ರೋತ್ಸಾಹವಿತ್ತರು. ಇತಂಹ ಪ್ರೋತ್ಸಾಹ ಪಡೆದ ಕವಿಗಳಲ್ಲಿ ಪಂಪ-ರನ್ನ-ಪೊನ್ನ ಎಂಬ 'ಕವಿರತ್ನತ್ರಯರು' ಪ್ರಮುಖರು ಪ್ರಸಿದ್ಧ ರಾಷ್ಟ್ರಕೂಟ ದೊರೆ ಕೃಷ್ಣನ ಸಾಮಂತನಾಗಿದ್ದ ಚಾಲುಕ್ಯ ಅರಸು ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿ ಪಂಪನು ಕವಿಯೂ,ಕಲಿಯೂ ಆಗಿದ್ದನು. ಕ್ರಿ.ಶ.941 ಇವನ ಜೀವಿತದ ಕಾಲವು. ವೆಂಗಿಮಂಡಳದ ವೆಂಗಿಪಳು (ಈಗಿನ ವೇಮುಲವಾಡ) ಎಂಬುದಿವನ ಹುಟ್ಟೂರು, ವತ್ಸ ಗೋತ್ರಜನಾಗಿದ್ದ, ಅನೇಕ ಯಾಗಗಳನ್ನು ಮಾಡಿ 'ಸರ್ವಕ್ರತುಯಾಜಿ' ಎಂಬ ಬಿರುದು ಪಡೆದಿದ್ದ ಮಾಧವ ಸೋಮಯಾಜಿ ಎಂಬವನು ಕವಿ ಪಂಪನ ಮುತ್ತಜ್ಜ. ಅಭಿರಾಮದೇವ (ಭೀಮ) ನೆಂಬವನು ಪಂಪನ ತಂದೆ. ಹಂಪ, ಹಂಪಗ, ಗುರುಹಂಪ ಎಂಬ ನಾಮಾಂತರಗಳು ಇವನಿಗಿದ್ದುವು. ಪುಲಿಗೆರೆಯ ತಿರುಳ್ಗನ್ನಡದಲ್ಲಿ ಇತನು ತನ್ನ ಗ್ರಂಥಗಳನ್ನು ಬರೆದಿದ್ದು ಬನವಾಸಿಯ ಮಲೆನಾಡಿನಲ್ಲಿ ತನ್ನ ಜೀವಮಾನದ ರಸವತ್ತಾದ ಭಾಗವನ್ನು ಕಳೆದಿರುವನು. ಮಧ್ಯಸ್ಥ ಆಕಾರ ಬಾಳೆಯ ಸುಳಿಯಂತೆ ಶ್ಯಾಮಲವಾದ ದೇಹಕಾಂತಿ, ಮೃದು. ಕುಟಿಲ ಶಿರೋರುಹ, ಪ್ರಸನ್ನ ಮನೋಹರ ಮುಖಮಂಡಲ ಈತನದು. ಈತನ ಧ್ವನಿ ದುಂದುಭಿ ಧ್ವನಿಗೆ ಸಮಾನ, ಹಿತ ಮಿತ ಮೃದು ವಚನ. ಜೈನ ಮತವನ್ನನುಸರಿಸುತ್ತಿದ್ದ ಬ್ರಾಹ್ಮಣ ಕವಿ ಪಂಪ ರಾಜಪುರೋಹಿತನಾಗಿದ್ದ ದೇವೇಂದ್ರ ಮುನೀಂದ್ರ ಎಂಬವನು ಪಂಪನು ಗುರು. 'ಸುಕಪಿ ಜನ ಮಾನೋಮಾನಸೋತ್ತಂಸ ಹಂಸ', 'ಕವಿತಾ ಗುಣಾರ್ಣವ', 'ಸಂಸಾರ ಸಾರೋದಯ', 'ಸರಸ್ವತೀ ಮಣಿಹಾರ', 'ಪುರಾಣಕವಿ' ಮುಂತಾದ ಬಿರುದುಗಳು ಈತನಿಗಿದ್ದುವು. ಪಂಪನು 'ನಾಡೋಜ' ನೆಂದೂ ಪ್ರಸಿದ್ಧನಾಗಿದ್ದನು.

ಪಂಪನು ಬರೆದ ಗ್ರಂಥಗಳು ಎರಡು. ಒಂದು ಧಾರ್ಮಿಕಗ್ರಂಥ. ಇನ್ನೊಂದು ಲೌಕಿಕ ಗ್ರಂಥ. ತನ್ನ ನಲವತ್ತನೆಯ ವಯಸ್ಸಿನಲ್ಲಿ ಆದಿಪುರಾಣವನ್ನು ಬರೆದನು. ಒಂದು ಜೀವ ಜನ್ಮ ಜನ್ಮಗಳ ಜವಣಿಕೆಯನ್ನು ಸರಿಸಿ ವೈರಾಗ್ಯ ಪರಿಣತಿಯನ್ನು ಸಾಧಿಸಿ ತೀರ್ಥಂಕರತ್ವವನ್ನು ಪಡೆಯುವವರೆಗಿನ ಹಲವು ಹಂತಗಳನ್ನು ಪಂಪ ಈ ಗ್ರಂಥದಲ್ಲಿ ಚಿತ್ರಿಸಿದ್ದಾನೆ. ಇಪ್ಪತ್ತನಾಲ್ಕು ಜೈನ ತೀರ್ಥಂಕರರಲ್ಲಿ ಮೊದಲಿಗನಾದ ವೃಷಭದೇವ (ಆದಿನಾಥ ಅಥವಾ ಪುರುದೇವನನ್ನು ಕುರಿತು ಬರೆದ ಹದಿನಾರು ಆಶ್ವಾಸಗಳ ಧಾರ್ಮಿಕ ಗ್ರಂಥವಿದು. ಇದಕ್ಕೆ ಮೂಲ ಸಂಸ್ಕೃತದಲ್ಲಿ ರಚಿತವಾಗಿರುವ ಜಿನಸೇನಾಚಾರರ್ಯ 'ಪೂರ್ವ ಪುರಾಣ'ವು ವಿಸ್ತಾರವಾದ ಪೂರ್ವಪುರಾಣದ ಕತೆಯ ಸ್ವಾರಸ್ಯವು ಕೆಡದಂತೆ ಸಂಗ್ರಹ ರೂಪವಾಗಿ ಪಂಪನು ಚಂಪೂ (ಗದ್ಯ ಪದ್ಯ ಮಿಶ್ರಿತ) ಶೈಲಿಯಲ್ಲಿ ಈ ಕೃತಿಯನ್ನು ರಚಿಸಿರುವನು. ಪುರುದೇವನ ಮಕ್ಕಳಾದ ಭರತ-ಬಾಹುಬಲಿಗಳ ಕಥೆಯು ಇದರಲ್ಲಿ ವಿವರಿಸಲ್ಪಟ್ಟಿದೆ.

'ವಿಕ್ರಮಾರ್ಜುನ ವಿಜಯ' ಅಥವಾ 'ಪಂಪಭಾರತ'ವು ಕವಿ ಪಂಪನ ಎರಡನೇಯ ಮತ್ತು ಹಿರಿಯ ಕೃತಿ 'ಬೆಳಗುವೆನಿಲ್ಲಿ ಲೌಕಿಕ ಮನಲ್ಲಿ ಜಿನಾಗಮಮಂ' ಎಂದು ಪಂಪನು ಹೇಳಿಕೊಂಡು ಕೇವಲ ಆರು ತಿಂಗಳಲ್ಲಿ ಈ ಚಂಪೂ ಗ್ರಂಥವನ್ನು ರಚಿಸಿದನು. ಸಂಸ್ಕೃತದ 'ವ್ಯಾಸ ಭಾರತ'ವನ್ನು 'ವಿಕ್ರಮಾರ್ಜುನ ವಿಜಯ'ವಾಗುವಂತೆ 'ಸಮಸ್ತ ಭಾರತ' ವಾಗುವಂತೆ ಕನ್ನಡಿಸಿರುವನು. ಈ ಗ್ರಂಥದಲ್ಲಿ ಕವಿಯು ತನ್ನ ಒಡೆಯನಾದ ಚಾಲುಕ್ಯ ಅರಸು ಎರಡನೇ ಅರಿಕೇಸರಿಯನ್ನು ಮಹಾ ಭಾರತದ ಅರ್ಜುನನಿಗೆ ಹೋಲಿಸಿ ಈ ಕೃತಿಯನ್ನು ರಚಿಸಿರುವನು. ಅರ್ಜುನನ ಹೆಸರು ಹೇಳಬೇಕಾದಲ್ಲೆಲ್ಲ ತನ್ನ ಒಡೆಯನ ಬಿರುದುಗಳಾದ 'ವಿಕ್ರಾಂತತುಂಗ', 'ಸಾಹಸಾಭರಣ', 'ಪರಾಕ್ರಮ ಧವಳ; 'ಗುಣಾರ್ಣವ, 'ಅರಿಗ', 'ಹರಿಗ', 'ವಿಕ್ರಮಾರ್ಜುನ' ಮುಂತಾದ ಹೆಸರುಗಳನ್ನು ಉಪಯೋಗಿಸಿರುವನು. ಮಹಾಭಾರತದ ಅರ್ಜುನನ ತೀರ್ಥ ಯಾತ್ರೆಯನ್ನು ತನ್ನೊಡೆಯ ಅರಿಕೇಸರಿಯ ದಿಗ್ವಿಜಯಕ್ಕೆ ಹೋಲಿಸಿ ಕತೆಯನ್ನು ಬರೆದಿರುವನು.

(ಮುಂದುವರಿಯುವುದು.)

## ಡಾ| ಬಿ.ಎಚ್.ಕೃಷ್ಣಮೂರ್ತಿ ರಾವ್




ಮಂಗಳೂರಿನಲ್ಲಿ ಜ್ಞಾನ ವೈದ್ಯರಾಗಿರುವ ಕೃಷ್ಣಮೂರ್ತಿಯವರಿಗೆ ಜೀವನ ಶ್ರೇಷ್ಠ ಸಾಧನೆಗಾಗಿ "ಶ್ರೇಷ್ಠ ಸಾಧಕ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ ಅಸೋಸಿಯೇಸನ್ ಆಫ್ ಫಿಷೀಶಿಕಲ್ ಇಂಡಿಯಾದ ಕರ್ನಾಟಕ ಮಟ್ಟದ ಸಮೇಳನವು ಇತೀಚಿಗೆ ಮಂಗಳೂರಿನಲ್ಲಿ ನಡೆದಿದ್ದು ಡಾ|ಕೃಷ್ಣಮೂರ್ತಿರಾಯರು ಈ ಪ್ರಶಸ್ತಿಯನ್ನು ಸಮಾರಂಭದಲ್ಲಿ ಸ್ವೀಕರಿಸಿದರು ಡಾ|ಕೃಷ್ಣಮೂರ್ತಿಯವರಿಗೆ ಶ್ರೀ ಶಾರದಾ ಅಭಿನಂದನೆಗಳು.

## ಸಂಶೋದನಾ ಅನುದಾನ

ಮಣಿಪಾಲ ಎಂ.ಐ.ಟಿ.ಯ ವಿದ್ಯುನ್ಮಾನ ಮತ್ತು ಸಂಪರ್ಕ ವಿಭಾಗದಲ್ಲಿ ಹಿರಿಯ ಸಹಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ. ಸಂಪತ್ ಕುಮಾರ್ ಇವರಿಗೆ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಂಶೋಧನಾ ಅನುದಾನ ಮಂಜೂರಾಗಿರುತ್ತದೆ. ಇದರ ಪಿ.ಎಚ್.ಡಿ. ಅಧ್ಯಯನ ಸಂಬಂಧಿ ಸಂಶೋಧನೆಗಾಗಿ ಮೂರು ವರ್ಷಗಳ ಅವಧಿಗೆ ರೂ 10.26 ಲಕ್ಷಗಳ ಅನುದಾನ ದುರೆಯಲಿದೆ ಇವರು ಕುಂಭಾಸಿಯಲ್ಲಿ ನೆಲೆಸಿರುವ ಶ್ರೀ.ಐ.ಪಿ.ರವೀಂದ್ರ ರಾವ್ ಹಾಗೂ ಶ್ರೀಮತಿ ಕುಮುದ್ವತಿ ದಂಪತಿಗಳ ಪುತ್ರರಾಗಿರುತ್ತಾರೆ.ಶ್ರೀ ಯವರು ಸಫಲತೆ ಲಭಿಸಲಿ ಎಂದು ಶ್ರೀ ಶಾರದಾ ಹಾರೈಕೆ.


## ವಿವಾಹ ಸುವರ್ಣ ಮಹೋತ್ಸವದ ಶುಭಾಶಯಗಳು



**ಶ್ರೀ ಯಂ.ರಾಮಣ್ಣ ಹೆಬ್ಬಾರ್ ಮತ್ತು ಶ್ರೀಮತಿ ವಿಜಯ. ಆರ್.ಹೆಬ್ಬಾರ್**

"ರಜತಶ್ರೀ" ಬನ್ನಂಜೆ ಉಡುಪಿ-1. ಫೋನ್ : 2526908

ದಾಂಪತ್ಯ ಜೀವನದ 50 ಸಂವತ್ಸರಗಳನ್ನು ಪೂರೈಸಿರುವ ತಮಗೆ ದೇವರು ಸುಖ, ಶಾಂತಿ,
ನೆಮ್ಮದಿ ಸಂಪತ್ತು ಮತ್ತು ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲೆಂದು ಪ್ರಾರ್ಥಿಸುವ

ಶ್ರೀ ಪ್ರಶಾಂತ.ಆರ್.(ಮಗ) GM (Marketing) Jindal Saw LTD ನಾಸಿಕ
ಶ್ರೀಮತಿ ವಾಣಿ ಪ್ರಶಾಂತ (ಸೊಸೆ), ನಿಶಿತ ಪ್ರಶಾಂತ (ಮೊಮ್ಮಗಳು)
ಶ್ರೀ ದಿವಾಕರ H.K (ಅಳಿಯ) D.G.M (L.&T construction) ಮುಂಬೈ
ಶ್ರೀಮತಿ ಪ್ರಶೀಲ ದಿವಾಕರ (ಮಗಳು) ದಿಪಿಂತಿ ದಿವಾಕರ (ಮೊಮ್ಮಗಳು)
ಶ್ರೀ ಮನೋಹರ ಪ್ರಸಾದ, Chief of news Bureau ಉದಯವಾಣಿ ಮಂಗಳೂರು
ಶ್ರೀ ಕೆ.ಶ್ರೀನಾಥ ಹೆಬ್ಬಾರ್ Land Traders Builders and Developers ಮಂಗಳೂರು
ಶ್ರೀಮತಿ ಮಂಜೂಷ ಶ್ರೀನಾಥ ಹೆಬ್ಬಾರ್, ಆದೀಶ ಶ್ರೀನಾಥ ಹೆಬ್ಬಾರ್

# ಶ್ರೀ ಮಠಾಮ್ನಾಯ ಸ್ತೋತ್ರಂ ಮತ್ತು 4 ಶ್ರೀ ಮಠಗಳ ಆಮ್ನಾಯಾದಿ ಪರಿಚಯ

**ಮುಕ್ಕ ಸಾಂತೂರು ವಿ.ಸುಬ್ರಹ್ಮಣ್ಯ ಶರ್ಮಾ**, ಆಯುರ್ವೇದಿ ಬೆಂಗಳೂರು

(.....ಹಿಂದಿನ ಸಂಚಿಕೆಯಿಂದ)

**2. ಗೋವರ್ಧನ ಮಠ–**

ಅದಿ ಶಂಕರರು ಸ್ಥಾಪಿಸಿದ 2ನೇ ಮಠ ಗೋವರ್ಧನ ಮಠ. ಅದು ಪೂರ್ವದಿಕ್ಕಿನಲ್ಲಿರುವುದು.

ಕ್ಷೇತ್ರದ ಹೆಸರು : ಪುರುಷೋತ್ತಮ ಕ್ಷೇತ್ರ. (ಈಗಿನ ಓಡಿಶ್ಯಾ ರಾಜ್ಯದಲ್ಲಿರುವ "ಪುರೀ ಕ್ಷೇತ್ರವು" (ಪಟ್ಟಣ) ಆದಿ ಶಂಕರರು ಜೀವಿಸಿಕೊಂಡಿದ್ದ ಕಾಲದಲ್ಲಿ "ಪುರುಷೋತ್ತಮ ಕ್ಷೇತ್ರ"ಎಂಬ ಅಭಿಧಾನ ಉಳ್ಳದಾಗಿತ್ತು.)
ದೇವರನಾಮ : ಪುರುಷೋತ್ತಮ ಜಗನ್ನಾಥ
ಶಕ್ತಿನಾಮ : ವಿಮಲಾದೇವೀ (ಈಗ ಇರುವ ಶಕ್ತಿಯ ಹೆಸರು "ಸುಭದ್ರಾ" ಅಥವಾ "ಸೌಭದ್ರೆ" ಆದಿ. ಶಂಕರರ ಅನಂತರದ ದೀರ್ಘ ಕಾಲಾವಧಿಯಲ್ಲಿ ಇಂಥದ್ದೊಂದು ತಬ್‌ದೀಪ ಆಗಿದೆ.)
ಸಂಪ್ರದಾಯ : ಭೂಸವಾಲ
ಆಮ್ನಾಯ : ಋಗ್ವೇದ
ತೀರ್ಥ : ಮಹೋದದಿ (ದೊಡ್ಡ ಸಮುದ್ರ)
ಪೀಠಾಚಾರ್ಯರು : ಪ್ರಸಿದ್ಧ ಬ್ರಹ್ಮಚಾರಿ ಹಸ್ತಾಮಲಕ
ಮಹಾವಾಕ್ಯ : ಪ್ರಜ್ಞಾನಂಬ್ರಹ್ಮ

**3. ಕಾಲಿಕಾ ಮಠ**

ಆದಿಶಂಕರರು ಲೋಕೋಪಕಾರಾರ್ಥಕ್ಕಾಗಿ ಸ್ಥಾಪನೆಗೈದ ಮೂರನೇ ಮಠ "ಕಾಲಿಕಾ ಮಠ". ಅದು ಪಶ್ಚಿಮ ದಿಕ್ಕಿನಲ್ಲಿರುವುದು.

ಕ್ಷೇತ್ರದ ಹೆಸರು : ದ್ವಾರಕಾ ಕ್ಷೇತ್ರ
ಮಠದ ಹೆಸರು : ಕಾಲಿಕಾ ಮಠ
ಅಲ್ಲಿರುವ ಶಕ್ತಿಯ ನಾಮ : ಭದ್ರಕಾಲೀ ದೇವಿ
ದೇದೀಪ್ಯಮಾನರಾದ ದೇವರನಾಮ : ಸಿದ್ಧೇಶ್ವರ ಅವರು
ಆಮ್ನಾಯ ನಾಮ: ಸಾಮವೇದ
ಆಸ್ಥಾಪಿತರಾದ ಪೀಠಾಚಾರ್ಯರು : ಆಚಾರ್ಯಪದ್ಮಪಾದ ಅವರು
ಸಂಪ್ರದಾಯ : ಕೀಟವಾಲ ಸಂಪ್ರದಾಯ
ತೀರ್ಥದ ಆಖ್ಯೆ : ಗೋಮತೀ ತೀರ್ಥ
ಮಹಾವಾಕ್ಯ : ತತ್ವಮಸಿ

**4. ಶ್ರೀ ಮಠ ಬದರಿಕಾಶ್ರಮ**

ಪೂಜ್ಯಶ್ರೀ ಶಂಕರ ಭಗವತ್‌ಪಾದರು ಸ್ಥಾಪಿಸಿದ 4ನೇ ಶ್ರೀ ಮಠವು ಬದರಿಕಾಶ್ರಮ ಆಗಿದೆ. ಅದು ಉತ್ತರ ದಿಗ್‌ಭಾಗದಲ್ಲಿದೆ.

ಕ್ಷೇತ್ರದ ಹೆಸರು : ಬದರಿಕಾಶ್ರಮ ಕ್ಷೇತ್ರ
ಮಠದ ಹೆಸರು : ಔತ್ತರೇಯ ಶ್ರೀಮಠ
ಅಲ್ಲಿ ಶೋಭಿಸುತ್ತಿರುವ ಶಕ್ತಿಯ ನಾಮ : ಪೂರ್ಣಗಿರಿ
ದೇವರ ನಾಮ : ನಾರಾಯಣ
ಆಮ್ನಾಯದ ಆಖ್ಯೆ: ಅಥರ್ವವೇದ
ಆಸ್ಥಾಪನೆಗೊಂಡ ಆಚಾರ್ಯರು : ತೋಟಕಾಚಾರ್ಯ. ಇಲ್ಲಿ ನೇಮಕಗೊಳ್ಳುವ ಆಚಾರ್ಯರುಗಳಿಗೆ, ಆನಂದಬ್ರಹ್ಮಚಾರಿ, ಗಿರಿ, ಪರ್ವತ ಮತ್ತು ಸಾಗರ ಎಂದು ನಾಮಾಂತನಾಮ ಬರುತ್ತದೆ.
ತೀರ್ಥನಾಮ : ಚಾಲಕನನ್ದಿಕಾ
ಸಂಪ್ರದಾಯ : ನನ್ದವಾಲ
ಮಹಾವಾಕ್ಯ : ಅಯಮ್ನಾಯ ಕೀರ್ತ್ಯತೆ

ಇಷ್ಟು ಆದಿ ಶಂಕರ ಭಗವತ್‌ಪಾದರು ಸನಾತನ ಧರ್ಮ ಅದ್ವೈತ ವೇದಾಂತ ಪ್ರತಿಪಾದಕನಾಗಿ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ಬೇರೆ ಬೇರೆ ನಾಲ್ಕು ಶ್ರೀ ಮಠಗಳ ಆಮ್ನಾಯಾದಿಗಳ ಕ್ರಮಬದ್ಧವಾದ ವಿವರಣೆ ಆಗಿರುತ್ತದೆ. ಶ್ರೀ ಶಂಕರ ಭಗವತ್ ಪಾದರ ವರ್ಚಸ್ಸಿಂದ ಮೂರ್ಲೋಕ ಪ್ರಸಿದ್ಧ ಋಷಿ ಮುನಿವಂದಿತರುಗಳಾದ ಸುರೇಶ್ವರ (ಬೃಹದಾರಣ್ಯಕಾದಿ ಉಪನಿಷತ್ ಗ್ರಂಥಗಳಿಗೆ ಸಂಸ್ಕೃತ ನುಡಿಯಲ್ಲಿ ವಾರ್ತಿಕ ಬರೆದವರು) ಹಸ್ತಾಮಲಕ, ಪದ್ಮಪಾದ, ತೋಟಕ ಆಚಾರ್ಯರು ಈ ಶ್ರೀ ಮಠ ಪೀಠಗಳನ್ನು ಅಲಂಕರಿಸಿ ಬಹುಮಂದಿ ಭಕ್ತರನ್ನು ಉದ್ಧರಿಸಿರುವರು. ಆದ್ದರಿಂದ ಹಿಂದಿನಿಂದ ನಡೆದುಕೊಂಡು ಬಂದಂತೆ ಆಯಾಯಾ ಶ್ರೀ ಮಠಾನುಯಾಯಿ ಭಕ್ತವೃಂದವರು ತತ್ತತ್ ಶ್ರೀಮಠಗಳನ್ನು ಅಲ್ಲಿ ಜರಗುವ ಮಹೋತ್ಸವಾದಿಗಳ ವೇಳೆ ಸಂದರ್ಶಿಸಿ, ಉತ್ತಮ ಜ್ಞಾನಿಗಳಾಗಿ ಮಕ್ಕಳು, ಮೊಮ್ಮಕ್ಕಳೊಂದಿಗೆ ಶತವರ್ಷ ಬಾಳಿ ಮೋಕ್ಷ ಹೊಂದುವವರಾಗಬೇಕು.

**ಗ್ರಂಥಋಣ :ಡಾ.ಎಚ್.ವಿ.ನರಸಿಂಹಮೂರ್ತಿಯವರು ಬರೆದ ''ಶೃಂಗೇರಿ ಶ್ರೀ ಶಾರದಾ ಪೀಠ'' ಎಂಬ ಪುಸ್ತಕದ 18ನೇ ಪುಟದಲ್ಲಿರುವ ಅನುಬಂಧ 2ರ ಕೆಳಗೆ ಮುದ್ರಿಸಿ ಕಾಣುವ ''ಶ್ರೀ ಮಠಾಮ್ನಾಯ ಸ್ತೋತ್ರಂ'' ಎಂಬುದರಿಂದ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಿ, ಕನ್ನಡಿಸಿ ಬರೆದಿರುವೆ. ಅದಕ್ಕಾಗಿ ಡಾ। ಮೂರ್ತಿಯವರಿಗೆ ನಾನು ತುಂಬಾ ಋಣಿಯಾಗಿರುವೆ. –ಲೇಖಕ**

# ಮೌನ ಮಾತಾದಾಗ (ಭಾಗ–1)

**–ಕ.ಸು.ಶ್ರೀ**

ಪೂರ್ವದಿಕ್ಕಿನಲ್ಲಿ ಭಗವಾನ್ ಶ್ರೀ ಸೂರ್ಯನಾರಾಯಣನು ತನ್ನ ದಿವ್ಯ ಕಿರಣಗಳನ್ನು ಸೂಸುತ್ತಾ ಮುತ್ತೈದೆಯ ಹಣೆಯ ಕುಂಕುಮದಂತೆ ಸುಂದರವಾಗಿ ಕಂಗೊಳಿಸುವುದು ಆತನ ದೈನಂದಿನ ಕೆಲಸ. ಇಂದು ದಿನಬೆಳಗಾದರೆ ಸಾಕು, ಎಲ್ಲೆಂದರಲ್ಲಿ ನೊಡಿದರೆ ಕೊಲೆ, ದರೋಡೆ, ಆತ್ಯಾಚಾರ, ಅನಾಚಾರ, ಪಕ್ಷಪಾತ, ಭ್ರಷ್ಟಚಾರ ಇವೆ ಮೊದಲಾದ ವಿಚಾರಗಳನ್ನು ಕೇಳು ನೋಡುವಂತೆ ಆಗಿದೆ. ಇಂದು ಎಲ್ಲಾ ವಿಚಾರಗಳಲ್ಲಿಯೂ ಭ್ರಷ್ಟಾಚಾರದ ಅಲೆಗಳನ್ನು ನೋಡುತ್ತಿದ್ದೇವೆ. ಇದಕೆಲ್ಲಾ ಕಾರಣಗಳು ಹತ್ತು–ಹಲವಾರು ಪರಿಹಾರಗಳನ್ನು ಕಂಡುಹಿಡಿಯು ಬೇಕಾದದ್ದೂ ಅನಿವ್ಯಾರ ಪರಿಹಾರವು ಇಂದಿನ ಯುವ ಶಕ್ತಿಯಲ್ಲಿದೆ. ಇಂದಿನ ಯುವ ಜನರಲ್ಲಿ ಇದರ ಮಹತ್ವವನ್ನು ರೂಪಿಸಬೇಕು ಈ ಎಲ್ಲಾ ಸಮಸ್ಯೆಗಳಿಗೆ ಶಕ್ತಿಯಿಂದ ಪರಿಹರಿಸುವುದು ಅಲ್ಲ, ಇದಕ್ಕೆ ಬದಲಾಗಿ ಯುಕ್ತಿಯಿಂದ ಬಗೆಹರಿಸಬೇಕು. 'ಪೆನ್ನು' ಎಂಬ ಅಸ್ತ್ರ ಹಿಡಿದು ಇಂಕು ಎಂಬ ರಕ್ತಚೆಲ್ಲಿ, ಪುಸ್ತಕ ಎಂಬ ರಣರಂಗದಲ್ಲಿ ವಿಜಯವನ್ನು ಸಾಧಿಸಿದಾಗಲೇ ನಾವು ಈ ನಾಡಿನಲ್ಲಿ ಜನಿಸಿದಕ್ಕೆ ಸಾರ್ಥಕವಾಗುತ್ತದೆ. ಯುವ ಶಕ್ತಿ ನನ್ನ ಪ್ರಾರ್ಥನೆಯನ್ನು ತಿಳಿದು ಸಹಕರಿಸಬೇಕು. ಯುವ ಶಕ್ತಿಗಳು ಇಂದು ಪೇಸ್ ಬುಕ್, ಇಂಟರ್ ನೆಟ್ ಮೊದಲಾದವುಗಳಲ್ಲಿ ಕಾಲಹರಣ ಮಾಡುವ ಬದಲು ದೇಶಪ್ರೇಮದ ಬರಹಗಳನ್ನು ಬರೆದು, ನಾಡಿನ ಸಮಸ್ತರಿಗೂ ಎಲ್ಲಾ ವಿಚಾರಗಳು ತಿಳಿಯುವಂತೆ ಮಾಡಬೇಕು. ಇಂದಿನ ಯುವ ಜನರು ನಾಡಿನ, ನಾಡ ಜನರ ಬಗ್ಗೆ ಬರಹಗಳನ್ನು ಬರೆಯಲೇ ಬೇಕಾದ ಸಂದರ್ಭ ಬಂದು ನಿಂತಿದೆ.

ಯುವ ಜನರಲ್ಲಿ ಆದೆಷ್ಟೊ ಕಲೆಗಳು ಅಡಕವಾಗಿರುತ್ತದೆ. ಅಂತಹ ಪ್ರತಿಭೆಗಳನ್ನು ಹೊರ ಚೆಲ್ಲುವುದೇ ನಮ್ಮ ಆಶಯವಾಗಿರ ಬೇಕು. ಮಾತಿಗಿಂತ ಮೌನ ಲೇಸು. ಮೌನದಲ್ಲಿ ಅದೆಷ್ಟೊ ಸರಿಯ ದಾರಿಯಲ್ಲಿ ನಡೆಯಲು ದಾರಿಯಾಗುತ್ತದೆ. ಇದಕ್ಕೆ ಹೇಳುವುದು ಮೌನ ಸಮ್ಮತೀ ಲಕ್ಷಣ ಎಂದು ಈ ರೀತಿಯ ಎಲ್ಲಾ ವಿಚಾರಗಳನ್ನು ಮೌನದಿಂದಲೇ ಬರೆಯುತ್ತಿದ್ದೇನೆ. ನನ್ನ ಅದೆಷ್ಟೊ ಅಂತರಂಗದ ಮೌನದ ಮಾತನ್ನು ನಿಮಗೆ ತಿಳಿಸಲೇಬೇಕಲ್ಲವೇ.

## ಕಂದನ ಅಳಲು

ಅಮ್ಮ ನನ್ನ ಬಾಲ್ಯವನ್ನೇಕೆ ಕಸಿಯುತ್ತಿರುವೆ?
ನೀನಾದರೋ ಆಡುತ್ತಾ ನಲಿಯುತ್ತಾ ಬಾಲ್ಯವನ್ನು ಕಳೆದೆ
ನನಗೇಕೆ ಈ ನಾಲ್ಕು ಗೋಡೆಗಳ ಬಂಧನ?
ಬಾಲ್ಯದಲ್ಲಿ ನಿನ್ನ ಪುಟ್ಟ ಬಳಗದೊಡನೆ ಸೇರಿ
ಕುಂಟಬಲ್ಲೆ, ಚಿಣ್ಣಿದಾಂಡು, ಮರಕೋತಿ ಆಟಗಳ
ಆಡಿ ನಲಿದಾಡಿದ ಭಾಗ್ಯ ನಿನ್ನದು
ನನಗೆಲ್ಲಿದೆ ಯಮ್ಮಾ ಅಂತಹ ಭಾಗ್ಯ?
ಬರಿದೆ ಓದು ಬರಹಗಳ ಕಾಟ
ಶಾಲೆಗೆ ಚಕ್ಕರ್ ಊಟಕೆ ಹಾಜರ್ ಎಂಬ ಗಾದೆ ನಿನ್ನದು
ಊರ ಮದುವೆ ಮಂಜಿಗಳಿಗೆಲ್ಲಾ ಹಾಜರಾಗುತ್ತಿದ್ದೆ ನೀನು
ನನಗಾದರೋ ಮನೆ ಸಮಾರಂಭಗಳಿಂದಲೂ ಗಡಿಪಾರು
ಅಂದು ಪರೀಕ್ಷೆಯೆಂದರೆ ಆಟವಾಗಿತ್ತು ನಿನಗೆ
ಇಂದು ಪರೀಕ್ಷೆಯೆಂದರೆ ಬಲು ಮತ್ತೆಂದೂ ಬಾರದಮ್ಮಾ
ಇನ್ನಾದರೂ ಸವಿಯಲು ಬಿಡಮ್ಮಾ ನನ್ನ ಬಾಲ್ಯದ ದಿನಗಳನ್ನು

★★★★

## ಅಮ್ಮನ ನೆನಪು

ಅಮ್ಮ ಕಾಡುತಿದೆ ನಿನ್ನ ನೆನಪು ಅನವರತ
ಕಡು ಬಡತನದಲ್ಲಿ ಕುಟ್ಟಿ ಬೆಳೆದು ನೀನು
ಹದಿನಾಲ್ಕರ ಹರೆಯದಲ್ಲಿ ಸಪ್ತಪದಿ ತುಳಿದು ಗೃಹಿಣಿಯಾದೆ
ನಲುವತ್ತರ ಮೊದಲೇ ನವಕಂದಮ್ಮಗಳ ಮಾತೆಯಾದೆ
ಸಂಸಾರ ರಥದ ಎಳೆತದಲ್ಲಿ ಪತಿಗೆ ಸಮನಾಗಿ ಹೆಗೆಲಿತ್ತ
ಬರಿದ ಕಷ್ಟವನ್ನಲ್ಲದೆ ನೀನು ಸುಖವನ್ನುಂಡನೆನಪಿಲ್ಲ ಎನಗೆ
ಆದರೂ ನಿನ್ನ ಮೊಗದಲ್ಲಿ ಮುಗ್ಧ ದುಂದ ಹಾಸವನ್ನು ಕಂಡೆ
ಬಾಳಿನ ಪ್ರತಿ ಕ್ಷಣವೂ ಮಕ್ಕಳ ಏಳಿಗೆಯನ್ನು ಬಯಸಿದೆ
ನಿನ್ನ ಕನಸು ನನಸಾಗುತ್ತಲೇ ನಮ್ಮಿಂದ ಮರೆಯಾದೆ
ಅಂದು ನನ್ನ ಎಳೆತನದಿಂದ ನಿನ್ನ ಮನದ ಭಾವ ತಿಳಿಯದಾದೆ
ನೀನಂದು ಕಲಿಸಿದ ಸ್ಥಿತ ಪ್ರಜ್ಞತೆಯ ಪಾಠ ನನಗಿಂದು ದಾರಿ ದೀಪ
ಅದರಂತೆ ನಡೆವುದೇ ನಾನಿನಗೆ ನೀಡುವ ಒಲುವಿನ ಕಾಣಿಕೆ

ಲೇಖಕರು: **ಶ್ರೀಮತಿ ಸೀತಾದೇವಿ ಬಾಸ್ಕರ್, ನಿವೃತ್ತ ಅಧ್ಯಾಪಿಕೆ**

## ಮಳೆರಾಯ

ಹೊಯ್ಯೋ ಹೊಯ್ಯೋ ಹಾಡಿರಯ್ಯೋ
ನವ ಹರುಪಿನ ಹೊಸ ಮಳೆರಾಯ್ಯೋ
ತೊಯ್ಯೋ ತೊಯ್ಯೋ ಕೊಯಿಸಯ್ಯೋ
ತಳ ಹಿಡಿದ ನದಿ, ಕೆರೆ, ಬಾವ್ಯೋ
ಪಯ್ಯೋ ಪಯ್ಯೋ ಪಸಿಯಸಿರಯ್ಯೋ
ಪಾಲಿಸಿ ಪ್ರಕೃತಿ ಜೀವ ಪೊರೆಯಯ್ಯೋ

**–ಪಿ. ಮೋಹನ್ ರಾವ್**

## ಮಾಂಗಲ್ಯಂ ತಂತುನಾನೇನ ....

ದಿವಂಗತ ಕೇದಿಗೆ ಭಾಗವತ ರತ್ನಾಕರರಾಯರ ಪುತ್ರ **ರಂಜನ್** ಹಾಗೂ ಉಡುಪಿ ಬನ್ನಂಜೆ ಹೀರಾಭಾಗ್‌ನ ಶ್ರೀಮತಿ ಮತ್ತು ಶ್ರೀ ಶಿವಪ್ರಸಾದ್ ಭಟ್‌ರವರ ಪುತ್ರಿ **ಗೌತಮಿ** ಇವರ ವಿವಾಹವು ದಿನಾಂಕ 19-05-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಕಸ್ತೂರಿ ಮತ್ತು ಎರ್ಮಾಳು ಜಯಶಂಕರರಾಯರ ಪುತ್ರ **ಗುರುರಾಜ** ಹಾಗೂ ಪುತ್ತೂರು ತಾಲೂಕು ಮರ್ಧಾಳದಲ್ಲಿ ವಾಸ್ತವ್ಯದಲ್ಲಿರುವ ಪಡುಬೆಳ್ಳೆಯ ಶ್ರೀಮತಿ ಮತ್ತು ಶ್ರೀ ರಾಘವೇಂದ್ರರಾಯರ ಪುತ್ರಿ **ಶ್ರೀದೇವಿ** ಇವರ ವಿವಾಹವು ದಿನಾಂಕ 02-06-2013 ರಂದು ಪುತ್ತೂರು ತೆಂಕಿಲದಲ್ಲಿರುವ ಸ್ವಾಮಿ ಕಲಾಮಂದಿರದಲ್ಲಿ ನೆರವೇರಿತು.

★★★★

ಕಾಸರಗೋಡು ಕಳನಾಡು ಶ್ರೀಮತಿ ಶಶಿಕಲಾ ಮತ್ತು ಶ್ರೀ ಮಂಜುನಾಥರಾಯರ ಪುತ್ರ **ಪವನ್ ಕುಮಾರ್** ಹಾಗೂ ಅದ್ಯಪಾಡಿ ಶ್ರೀಮತಿ ಜಯಶ್ರೀ ಮತ್ತು ಶ್ರೀ ಜಯಕುಮಾರ್ ಇವರ ಪುತ್ರಿ **ಪಾವನಾ** ಇವರ ವಿವಾಹವು ದಿನಾಂಕ 03-06-2013ರಂದು ಪಣಂಬೂರು ಶ್ರೀ ನಂದನೇಶ್ವರ ದೇವಸ್ಥಾನದಲ್ಲಿ ನೆರವೇರಿತು.

★★★★

ಬೆಂಗಳೂರಿನಲ್ಲಿರುವ ನಂದಳಿಕೆ ಶ್ರೀ ಪ್ರಭಾಕರರಾವ್ ಮತ್ತು ಶ್ರೀಮತಿ ವನಮಾಲಾ ಇವರ ಪುತ್ರ **ಪ್ರಸಾದ** ಹಾಗೂ ಹವರಾಲು ಶ್ರೀ ನೀಲಕಂಠರಾವ್ ಮತ್ತು ಶ್ರೀಮತಿ ನಾಗಲಕ್ಷ್ಮೀ ಇವರ ಪುತ್ರಿ **ಸರಿತಾ** ಇವರ ವಿವಾಹವು ದಿನಾಂಕ 27-05-2013ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

ಕಂಬಳಬೆಟ್ಟು ಶ್ರೀಮತಿ ಸೇವಂತಿ ಮತ್ತು ಶ್ರೀ ದಿವಾಕರರಾಯರ ಪುತ್ರ **ಕುಮಾರ ಸ್ವಾಮಿ** ಹಾಗೂ ಕಲ್ಯ ಗಾಯತ್ರಿ ಸದನದ ಶ್ರೀ ಚಂದ್ರಶೇಖರ್‌ರಾವ್ ಮತ್ತು ಶ್ರೀಮತಿ ಭಾರತಿಯವರ ಪುತ್ರಿ **ರಶ್ಮಿ** ಇವರ ವಿವಾಹವು ದಿನಾಂಕ 02-05-2013ರಂದು ಬೋಳ ಪಿಲಿಯೂರು ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ನೆರವೇರಿತು.

★★★★

ಶ್ರೀಮತಿ ಮತ್ತು ಶ್ರೀ ಕೆ.ಜಗದೀಶ ಹೆಬ್ಬಾರರ ಪುತ್ರಿ **ದೀಪ್ತಿ** ಹಾಗೂ ಶ್ರೀಮತಿ ಮತ್ತು ಶ್ರೀ ಬಿ.ಕೃಷ್ಣರಾವ್ ಇವರ ಪುತ್ರ **ಕೆ.ಪ್ರಸನ್ನ ಕುಮಾರ್** ಇವರ ವಿವಾಹವು ಉಡುಪಿ ಪಲಿಮಾರು ಮಠದ ದಿನಾಂಕ 23-05-2013ರಂದು ಶ್ರೀ ವಿದ್ಯಾಮಾನ್ಯ ಸಭಾಭವನದಲ್ಲಿ ಜರಗಿತು.

★★★★

ಶ್ರೀಮತಿ ಸುಶೀಲ ಮತ್ತು ದಿ.ಜ್ಞಾನೇಶ ರಾವ್ ಬ್ರಹ್ಮಾವರ ಇವರ ಪುತ್ರ **ಸಂತೋಷ** ಹಾಗೂ ಶ್ರೀಮತಿ ಸುಲೋಚನಾ ಮತ್ತು ಶ್ರೀ ಮನೋಹರರಾವ್ ಕೆಡೇಲು ಇವರ ಪುತ್ರಿ **ಸೌಮ್ಯ** ಇವರ ವಿವಾಹವು ದಿನಾಂಕ.23-05-2013ರಂದು ಹೆಬ್ರಿ ಶ್ರೀ ಅನಂತಪದ್ಮನಾಭ ಸನ್ನಿಧಿಯಲ್ಲಿ ಜರಗಿತು

★★★★

## ಉಪನಯನ

**ಚಿ| ತೇಜಸ್**

ಮಹಾರಾಷ್ಟ್ರದ ಪುಷ್ಯಗಾಂನಲ್ಲಿ ವಾಸ್ತವ್ಯದಲ್ಲಿರುವ ಹೆಜಮಾಡಿ ಶ್ರೀಮತಿ ಇಂದಿರಾ ಮತ್ತು ಶ್ರೀ ನಾಗೇಶ್ ಇವರ ಪುತ್ರ ತೇಜಸ್‌ನ ಬ್ರಹ್ಮೋಪದೇಶವು ದಿನಾಂಕ 15-05-2013 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

**ಚಿ| ಅನೀಶ್**

ಹಳೆಯಂಗಡಿ ತೋಕೂರು ಸುಬ್ರಹ್ಮಣ್ಯ ನಗರದ ಶ್ರೀಮತಿ ಸುಮಾ ಮತ್ತು ಶ್ರೀ ವೈ.ವಿ. ರಾಜೇಶ್ ಇವರ ಪುತ್ರ ಅನೀಶ್‌ನ ಬ್ರಹ್ಮೋಪದೇಶವು ದಿನಾಂಕ 15-05-2013 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

**ಚಿ| ಚಿಂತಾಮಣಿ**

ಸೂರಾಲು ಶ್ರೀಮತಿ ಮಂಜುಳಾ ಮತ್ತು ಶ್ರೀ ಮಾನಿಶ್ ಹೆಬ್ಬಾರ್ ಇವರ ಪುತ್ರ ಚಿಂತಾಮಣಿಯ ಬ್ರಹ್ಮೋಪದೇಶವು ದಿನಾಂಕ 27-05-2013ರಂದು ಉಡುಪಿ ರಥಬೀದಿಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ನೆರವೇರಿತು.

★★★★

**ಚಿ| ಅನುಸ್ವರ್**

ಬೆಳ್ಮಣ್ಣಿನಲ್ಲಿರುವ ಶ್ರೀಮತಿ ಸ್ನೇಹಲತಾ ಮತ್ತು ಶ್ರೀ ರಾಘವೇಂದ್ರ ಬಿ. ರಾವ್ ಬೆಳ್ಳೆ ಇವರ ಪುತ್ರ ಅನುಸ್ವರ್‌ನ ಬ್ರಹ್ಮೋಪದೇಶವು ದಿನಾಂಕ 29-05-2013ರಂದು ಬೆಳ್ಮಣ್ಣಿನ ನೂತನ ಗೃಹ ಸ್ನೇಹರಾಗದಲ್ಲಿ ನೆರವೇರಿತು.

★★★★

**ಚಿ| ಪ್ರಶಾಂತ್**

ಕಾಪು ಶ್ರೀಮತಿ ಮತ್ತು ಶ್ರೀ ಕೆ.ಉದಯರಾವ್ ಇವರ ಪುತ್ರ ಪ್ರಶಾಂತ್‌ನ ಬ್ರಹ್ಮೋಪದೇಶವು ದಿನಾಂಕ 16-05-2013ರಂದು ಕಾಪು ಶ್ರೀ ಲಕ್ಮೀ ಜನಾರ್ದನ ಸಭಾಭವನದಲ್ಲಿ ನೆರವೇರಿತು.

★★★★

**ಚಿ| ಸ್ಕಂದ್**

ನಾಸಿಕ್‌ನಲ್ಲಿರುವ ಕಳತ್ತೂರು ಶ್ರೀ ರವೀಂದ್ರ ಶಾನುಭಾಗ್ ಮತ್ತು ಶ್ರೀಮತಿ ಭಾರತಿ ಇವರ ಪುತ್ರ ಸ್ಕಂದ್‌ನ ಬ್ರಹ್ಮೋಪದೇಶವು ದಿನಾಂಕ 29-05-2013ರಂದು ಉಡುಪಿ ರಥಬೀದಿಯಲ್ಲಿರುವ ಶ್ರೀ ರಾಘವೇಂದ್ರ ಮಠದಲ್ಲಿ ನೆರವೇರಿತು.

★★★★

**ಚಿ| ರೂಪೇಶ್**

ಶ್ರೀಮತಿ ಅಶ್ವಿನಿ ಮತ್ತು ದೀಪಕ್ ಇವರ ಪುತ್ರ ರೂಪೇಶ್‌ನ ಬ್ರಹ್ಮೋಪದೇಶವು ದಿನಾಂಕ. 12-05-2013ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶ್ರೀ ಶಾರದ್ವತ ಯಜ್ಞಾಂಗಣದಲ್ಲಿ ನೆರವೇರಿತು.

★★★★

ಬೆಂಗಳೂರಿನ ಶ್ರೀಮತಿ ಸುಮಾ ಮತ್ತು ಶ್ರೀ ಐ.ಕೆ.ರಾಜೇಂದ್ರ ಬೆಂಗಳೂರು ಇವರ ಪುತ್ರಿ **ವಜ್ರಲಾ** ಹಾಗೂ ಬಪ್ಪಳಿಗೆ ಶ್ರೀ ರಾಜಾರಾಮರಾವ್ ಮತ್ತು ದಿ| ಶುಭರಾಜ್ ಬೆಂಗಳೂರು ಇವರ ಪುತ್ರ **ನಿತಿನ್ ರಾಜ್** ರೊಂದಿಗೆ ದಿನಾಂಕ 20-5-2013ರಂದು ಬೆಂಗಳೂರಿನಲ್ಲಿರುವ ಎನ್.ಡಿ.ಕೆ ಕಲ್ಯಾಣ ಮಂದಿರದಲ್ಲಿ ಜರಗಿತು.

## ಗೃಹಪ್ರವೇಶ

ಶ್ರೀಮತಿ ಸ್ನೇಹಲತಾ ಮತ್ತು ಶ್ರೀ ರಾಘವೇಂದ್ರ ಬಿ. ರಾವ್ ಬೆಳ್ಳೆ ಇವರು ಬೆಳ್ಮಣ್ಣಿನ ಹೊಸಮಾರಿನಲ್ಲಿ ನಿರ್ಮಿಸಿದ ನೂತನ ಗೃಹ "ಸ್ನೇಹರಾಗ"ದ ಪ್ರವೇಶೋತ್ಸವವನ್ನು ದಿನಾಂಕ 29-05-2013ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

★★★★

ಶ್ರೀಮತಿ ಶಶಿಕಲಾ ಮತ್ತು ಶ್ರೀ ಮಟ್ಟು ನಾಗರಾಜರಾವ್ ಇವರು ಮಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಬಳಿ ನಿರ್ಮಿಸಿದ ನೂತನ ಗೃಹ "ಶ್ರೀ ವಿಷ್ಣುಕೃಪಾ"ದ ಪ್ರವೇಶೋತ್ಸವವನ್ನು ದಿನಾಂಕ 30-05-2013ರಂದು ಬಂಧು ಬಾಂಧವರೊಡಗೂಡಿ ನೆರವೇರಿಸಿದರು.

★★★★

ಬೆಳ್ಮಣ್ಣು ದಿ|ನಾರಾಯಣ ರಾಯರ ಮಗ ಶ್ರೀ ಅಶೋಕ್‌ರವರು ಉಡುಪಿ ಚಿಟ್ಪಾಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ "ನಾರಾಯಣ ನಿವಾಸ"ದ ಪ್ರವೇಶೋತ್ಸವವನ್ನು ದಿನಾಂಕ.20-05-2013 ಸೋಮವಾರ ಬಂಧುಬಾಂಧವರೊಡಗೂಡಿ ನೆರವೇರಿಸಿದರು.

★★★★

ಉಜ್ಜೋಡಿ ಶ್ರೀ ಸುರೇಶರಾವ್ ಇವರು ಮೂಡಬಿದ್ರೆಯಲ್ಲಿ ನೂತನವಾಗಿ ನಿರ್ಮಿಸಿದ "ಸುಧಾಶ್ರೀ' ಗೃಹಪ್ರವೇಶೋತ್ಸವವನ್ನು ದಿನಾಂಕ.16-05-2013ರಂದು ನೆರವೇರಿಸಿದರು

★★★★

ತಾ.22-05-2013ರಂದು ಕುಮಾರಿ ವಸುಂಧರಾ ಹಾಗೂ ಶ್ರೀಮತಿ ಮತ್ತು ಶ್ರೀ ಕುಮಾರಸ್ವಾಮಿ ಇವರು ಮಣಿಪಾಲದ ಅನಂತನಗರದಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ 'ಶ್ರೀ ನಿವಾಸ' ಇದರ ಪ್ರವೇಶೋತ್ಸವವನ್ನು ನೆರವೇರಿಸಿದರು.

**ಚಿ| ಸೂರಜ್**

ಬಳ್ಳಾರಿಯಲ್ಲಿರುವ ಶ್ರೀ ಸಿ.ಸುಧೀರ್ ಕುಮಾರ್ ಮತ್ತು ಶ್ರೀಮತಿ ಸೀಮಾ ಇವರ ಪುತ್ರ ಸೂರಜ್‌ನ ಬ್ರಹ್ಮೋಪದೇಶವು ದಿನಾಂಕ 31-05-2013ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

**ಚಿ| ಸಂಕೇತ್**

ಬಳ್ಳಾರಿಯಲ್ಲಿರುವ ಶ್ರೀಮತಿ ಶಾರದಾ ಮತ್ತು ಶ್ರೀ ಸಿ.ಸುರೇಶ್ ಕುಮಾರ್ ಇವರ ಪುತ್ರ ಸಂಕೇತ್‌ನ ಬ್ರಹ್ಮೋಪದೇಶವು ದಿನಾಂಕ 31-05-2013ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★★

**ಚಿ| ಸ್ವರೂಪ್**

ಹಾವೇರಿಯಲ್ಲಿರುವ ಕುಕ್ಕಿಕಟ್ಟೆ ಶ್ರೀ ಅರುಣ ಕುಮಾರ್ ಮತ್ತು ಶ್ರೀಮತಿ ಸವಿತಾ ಇವರ ಪುತ್ರ ಸ್ವರೂಪ್‌ನ ಬ್ರಹ್ಮೋಪದೇಶವು ದಿನಾಂಕ 02-06-2013ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶ್ರೀ ಶಾರದ್ವತ ಯಜ್ಞಾಂಗಣದಲ್ಲಿ ನೆರವೇರಿತು.

★★★★

**ಚಿ| ಸಮರ್ಥ್**

ಶ್ರೀ ಬಿ.ಶ್ರೀನಿವಾಸಯ್ಯ ಮತ್ತು ಶ್ರೀಮತಿ ಜಾಹ್ನವಿ ಚಿಕ್ಕಮಂಗಳೂರು ಇವರ ಪುತ್ರ ಸಮರ್ಥ್‌ನ ಬ್ರಹ್ಮೋಪದೇಶವು ದಿನಾಂಕ 03-06-2013ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

## ವಿಳಾಸ ಬದಲಾವಣೆ

**Anantharama Shastry K.**
M.Sc. CAIIB (1)
Chief Manager,
State Bank of Mysore
Flate No.406, A Block,
Divya MSR Gateway,
72, M.S.Ramaiah Road, Gokula,
Mathikere, Bangalore-560054

★★★★

**Deepak R. Shanbhag**
D.No.5/1/1, C/o Lilly D'Souza,
W/o Victor D'Souza,
Little Flower, Near Country Club,
Yekkur, Mangalore-7.

★★★★

**Mrs. Nandini S. Rao**
D.No.14.6, Kuchi Kadu,
D'Souza Compound,
Kalpane, Mangalore.

## ಶುಭ ಜನನ

ಬೆಳ್ವೆ ಅಂಬ್ಲಿಕಟ್ಟೆಯ ಶ್ರೀ ಗಿರೀಶ್ ಹೆಬ್ಬಾರ್ ಮತ್ತು ಶ್ರೀಮತಿ ಶ್ರೀದೇವಿ ದಂಪತಿಗಳಿಗೆ ತಾ.07-06-2013ರಂದು ಗಂಡು ಮಗುವಿನ ಜನನ.

## ನಾಮಕರಣ

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಕೆ. ನಿತಿನ್ ಕುಮಾರ್ (ಶ್ರೀಮತಿ ಮತ್ತು ಶ್ರೀ ಕೆ. ದೇವರಾಜ ಶಾಸ್ತ್ರಿ ಅಲೆವೂರು ಇವರ ಪುತ್ರ) ಹಾಗೂ ಶ್ರೀಮತಿ ಅಕ್ಷತಾ ಇವರ ಪುತ್ರಿ ನಿಹಿರಾ ಇವಳ ನಾಮಕರಣವು ಅಲೆವೂರಿನ ಸ್ವಗೃಹದಲ್ಲಿ ತಾ.01-05-2013 ರಂದು ನೆರವೇರಿತು.

## ವಿದೇಶ ಪ್ರಯಾಣ

ಮಂಗಳೂರು ಕೂಳೂರಿನಲ್ಲಿ ವಾಸ್ತವಾಗಿರುವ ಶ್ರೀ ಐ.ಶ್ರೀನಿವಾಸ ರಾವ್ ಹಾಗೂ ಶ್ರೀಮತಿ ಪುಷ್ಪಾವತಿ ದಂಪತಿಗಳು ಕಳೆದ ನವೆಂಬರ್ ನಿಂದ ಫ್ಲೋರಿಡಾದ ಮಿಯಾಮಿ ಯಲ್ಲಿರುವ ತಮ್ಮ ಪುತ್ರಿ ಶ್ರೀಮತಿ ಸೌಮ್ಯ ಹಾಗೂ ಅಳಿಯ ಶ್ರೀ ರಾಮ್ ಪ್ರಸಾದ್‌ರ ಜೊತೆ ಇದ್ದು ಮೇ23ಕ್ಕೆ ಸ್ವದೇಶಕ್ಕೆ ಆಗಮಿಸಿದ್ದಾರೆ.

## ನಿಧನ

### ಮಹಾಬಲಯ್ಯ

ಬ್ರಹ್ಮಾವರ ದೇವಸ್ಥಾನದ ಬಳಿ ವಾಸ್ತವ್ಯ ದಲ್ಲಿದ್ದ ಮಹಾಬಲಯ್ಯನವರು (87 ವರ್ಷ) ತಾ.12-5-2013ರಂದು ದೈವಾಧೀನರಾದರು. ಮೃತರು ಪತ್ನಿ, ಬಿಎಸ್‌ಎನ್‌ಎಲ್ ಕುಂದಾಪುರ ವಿಭಾಗದ ಉಪವಿಭಾಗೀಯ ಅಭಿಯಂತಕರಾಗಿರುವ ಪುತ್ರ ಶ್ರೀಕೃಷ್ಣಮೂರ್ತಿ ರಾವ್ ಸಹಿತ ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಶುಶ್ರತ್

ಸುಳ್ಯ ತಾಲೂಕು ಪೂಗವನದ ಅರೆಕಾಡು ಸುಶ್ರುತ್ ತಾ.25-5-2013ರಂದು ನಿಧನರಾದರು. ಬೆಂಗಳೂರಿನಲ್ಲಿ ಇಂಜಿನಿಯರ್‌ರಾಗಿದ್ದ ಮೃತರು ಅರೆಕಾಡು ಶ್ರೀ ಶ್ರೀನಿವಾಸ ರಾಯರ ಪುತ್ರ. ಮೃತರು ತಂದೆ, ತಾಯಿ, ಪತ್ನಿ, ಸಹೋದರ ಸಹೋದರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

### ಕು. ರಚನಾ.ಎಚ್.ರಾವ್



ನವಿ ಮುಂಬೈಯ ನೆರೂಲ್‌ನಲ್ಲಿರುವ ಎಸ್.ಬಿ.ಒ.ಎ. ಪಬ್ಲಿಕ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಕು. ರಚನಾ ಎಚ್.ರಾವ್ ಇವಳು ಕಳೆದ ಎಪ್ರಿಲ್ ತಿಂಗಳಲ್ಲಿ "ಹಾಕಿ ಇಂಡಿಯಾ" ಇವರು ಜಾರ್ಖಂಡ್‌ನ ರಾಂಚಿಯಲ್ಲಿ 19 ವರ್ಷಕ್ಕಿಂತ ಕೆಳಗಿನ ಮಹಿಳೆಯರಿಗಾಗಿ ಏರ್ಪಡಿಸಿದ್ದ "ಮೂರನೇ ಜೂನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್ ಶಿಪ್ –2013" ಇದರಲ್ಲಿ ತಂಡಕ್ಕೆ ಆಯ್ಕೆಯಾಗಿದ್ದು ಮಹಾರಾಷ್ಟ್ರ ರಾಜ್ಯವನ್ನು ಪ್ರತಿನಿಧಿಸಿದ್ದಾಳೆ.

ಇವಳು 2010ರ ಸಾಲಿನಲ್ಲಿ ಮಹರಾಷ್ಟ್ರದ ಸಿಂಧುದುರ್ಗದಲ್ಲಿ 14 ವರ್ಷದ ಕೆಳಗಿನವರಿಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಹಾಕಿ ಸ್ಪರ್ಧೆಯಲ್ಲಿ ಕೂಡ ಮುಂಬೈನ ಅವಳ ಶಾಲೆಯಿಂದ ಆಯ್ಕೆಯಾಗಿದ್ದು, ರಾಜ್ಯ ಮಟ್ಟದಲ್ಲಿ ಅವಳ ತಂಡಕ್ಕೆ ದ್ವಿತೀಯ ಸ್ಥಾನವನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದಳು.

ಬಹುಮುಖ ಪ್ರತಿಭೆಯ ಕು.ರಚನಾ ಭರತ ನಾಟ್ಯದಲ್ಲಿ ಕರ್ನಾಟಕ ಸರಕಾರ ನಡೆಸುವ ಪರೀಕ್ಷೆಯಲ್ಲಿ ಜೂನಿಯರ್ ವಿಭಾಗದಲ್ಲಿ ತೇರ್ಗಡೆಯಾಗಿದ್ದು ಚಿತ್ರಕಲೆಯಲ್ಲೂ ಆಸಕ್ತಿ ಹೊಂದಿದ್ದಾಳೆ. ಇವಳು ಮುಂಬೈನಲ್ಲಿ ನೆಲೆಸಿರುವ ಶ್ರೀ ಪಾದೆಬೆಟ್ಟು ಹಿರಿಯಣ್ಣ ರಾವ್ ಮತ್ತು ರಾಜೇಶ್ವರಿ ಅವರ ಸುಪುತ್ರಿಯಾಗಿದ್ದಾಳೆ." ಇವಳ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ರಾಯೀ ರಂಜಿತ್ ಕುಮಾರ್



2012-13ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಯೀ ರಂಜಿತ್ ಕುಮಾರ್ ಶೇ.93.44 (584) ಅಂಕಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಮೂಡುಬಿದಿರೆಯ ಜೈನ ಪ್ರೌಢಶಾಲೆಯ ವಿದ್ಯಾರ್ಥಿಯಾದ ಈತ ರಾಯೀ ರಾಜ್‌ಕುಮಾರ್ ಹಾಗೂ ಶ್ರೀಮತಿ ಸುಮಾರವರ ಪುತ್ರ. ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

*Poetry*

**MY CHILDHOOD**

Childhood are the days
This makes everyone feel gay.

These are the days in which I fell down from my cot
and I cried a lot.

These are the days I played with water and mud
When I remember it I feel oh my God !

But these are the days,
Which fills my mouth with honey
Even when I do not have money

-Pragathi Bhandi, Perdoor

### ಮಾ। ಹೇಮನಾಥ್ ಅಮರ್‌ದೀಪ್ ಸಾಂತೂರು



2012-13ನೇ ಸಾಲಿನ ಕರ್ನಾಟಕದ ಸಿಇಟಿ ಪರೀಕ್ಷೆಯಲ್ಲಿ ಮೆಡಿಕಲ್ ವಿಭಾಗದಲ್ಲಿ ಮಾ। ಹೇಮನಾಥ್ ಅಮರ್‌ದೀಪ್ ಸಾಂತೂರು ಪ್ರಥಮ ಸ್ಥಾನ ಗಳಿಸಿದ್ದಾನೆ. ರಾಷ್ಟ್ರೀಯ ಸಾಯನ್ಸ್ ಒಲಿಂಪಿಯಾಡ್‌ನಲ್ಲಿಯೂ ಪ್ರಥಮ ಸ್ಥಾನ ಗಳಿಸಿದ್ದ ಈತ ಭಾರತ ರಾಷ್ಟ್ರೀಯ ಬಯಾಲಜಿ ಒಲಿಂಪಿಯಾಡ್‌ನ 3ನೇ ಹಂತದಲ್ಲಿಯೂ ಆಯ್ಕೆಗೊಂಡಿರುತ್ತಾನೆ. ಶ್ರೀ ಸಾಂತೂರು ಅಮರ್‌ದೀಪ್ ಮತ್ತು ಶ್ರೀಮತಿ ತನುಜಾ ದಂಪತಿಗಳ ಪುತ್ರನಾದ ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು। ಅಂಕಿತಾ ಭಂಡಿ



2012-13ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕು। ಅಂಕಿತಾ ಭಂಡಿ 92% ಅಂಕ ಪಡೆಯುವುದರೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಗೊಂಡಿರುತ್ತಾಳೆ. ಹೆಬ್ರಿ ಎಸ್.ಆರ್.ಎಸ್. ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾದ ಈಕೆ ಪೆರ್ಡೂರಿನ ಶ್ರೀಮತಿ ಆಶಾ ಭಂಡಿ ಹಾಗೂ ಶ್ರೀ ಗಣೇಶ್ ಭಂಡಿಯವರ ಸುಪುತ್ರಿ. ಶಿಕ್ಷಣ ಪರಜಾತಿ ವೇದಿಕೆಯಿಂದ ಏರ್ಪಡಿಸಿದ ಏಕದಿನದ ಪರೀಕ್ಷಾ ಪೂರ್ವ ತಯಾರಿ ಶಿಬಿರದಲ್ಲಿ ಹಾಜರಾಗಿ ಉತ್ತಮ ಅಂಕಗಳನ್ನು ಪಡೆದ ಇವಳಿಗೆ ಶ್ರೀಶಾರದಾ ಅಭಿನಂದನೆಗಳು.

### ಅನುಜ್ಞಾ



ಮಂಗಳೂರಿನಲ್ಲಿರುವ ಶ್ರೀ ಶ್ಯಾಮಪ್ರಸಾದ್ ಶ್ಯಾನುಭೋಗ್ ಮತ್ತು ಶ್ರೀಮತಿ ಜ್ಯೋತಿ ದಂಪತಿಗಳ ಪುತ್ರಿ ಕು। ಅನುಜ್ಞಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 573 (95.5%) ಅಂಕ ಗಳಿಸಿರುತ್ತಾಳೆ ಹಾಗೂ ಸಿಇಟಿ ಮೆಡಿಕಲ್‌ನಲ್ಲಿ 81ನೇ ರ್‍ಯಾಂಕ್ ಪಡೆದಿರುತ್ತಾಳೆ. ಈಕೆ ಮಂಗಳೂರಿನಲ್ಲಿರುವ ಕೂಡ್ಲು ವಿಷ್ಣು ಶ್ಯಾನುಭೋಗ್ ಮತ್ತು ದಿ। ಪ್ರೇಮಾವತಿ ಅಮ್ಮ ಹಾಗೂ ಕೋಟೇಶ್ವರದಲ್ಲಿರುವ ಪಿ. ಕೃಷ್ಣಮೂರ್ತಿ ಮತ್ತು ವರದಾ ದಂಪತಿಗಳ ಪೌತ್ರಿ.

### ಮೈತ್ರಿ ರಾವ್. ಕೆ.



2012–13ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 558 ಅಂಕಗಳೊಂದಿಗೆ (93%) ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಪುತ್ತೂರಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾದ ಈಕೆ ಕಾವು ನಿಧಿಮುಂಡ ಮನೆಯ ಚಂದ್ರಶೇಖರ ರಾವ್‌ಕೆ. ಮತ್ತು ಶ್ಯಾಮಲಾ ರಾವ್. ಕೆ. ದಂಪತಿಗಳ ಸುಪುತ್ರಿ. ಇವಳ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು। ಮೇಧಾ



2012-13ನೇ ಸಾಲಿನ ಸಿಬಿಎಸ್‌ಇ 12ನೇ ತರಗತಿಯ ಪರೀಕ್ಷೆಯಲ್ಲಿ ಕು। ಮೇಧಾ ಶೇ.95 ಅಂಕಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಉಡುಪಿಯ ಶ್ರೀಮತಿ ಅನುರಾಧಾ ಮತ್ತು ಶ್ರೀ ಉದಯ ಬಿ. ಇವರ ಪುತ್ರಿಯಾದ ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಮಾ। ನವನೀಶ್ ಕುಮಾರ್ ಬಿ.



2012-13ನೇ ಸಾಲಿನ ಕರ್ನಾಟಕ ಸಿಇಟಿ ಪರೀಕ್ಷೆಯಲ್ಲಿ ಪುತ್ತೂರು ವಿವೇಕಾನಂದ ಕಾಲೇಜಿನ ವಿದ್ಯಾರ್ಥಿ ಮಾ। ನವನೀಶ್ ಕುಮಾರ್ 96ನೇ ರ್‍ಯಾಂಕ್ ಪಡೆದು ಕೀರ್ತಿವಂತನಾಗಿದ್ದಾನೆ. ಶಿಕ್ಷಕರಾದ ಶ್ರೀ ರಾಜೇಂದ್ರ, ಬಜಕೂಡ್ಲು ಹಾಗೂ ಶ್ರೀಮತಿ ರಾಜಲಕ್ಷ್ಮೀ ದಂಪತಿಗಳ ಪುತ್ರನಾದ ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಕು॥ಜ್ಯೋತ್ಸ್ನಾ



ಉಡುಪಿ ಕುಂಜೂರಿನಲ್ಲಿರುವ ಚೊಕ್ಕಾಡಿ ಭಾಸ್ಕರ್ ರಾವ್ ಮತ್ತು ಸುಧಾರಾವ್ ರವರ ಪುತ್ರಿ ಜ್ಯೋತ್ಸ್ನಾ ಇವಳು 2012–13ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 590 ಅಂಕ (94.4%) ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಅದಮಾರು ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿನಿಯಾದ ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕುಮಾರಿ ಅಪೂರ್ವ ಶ್ರೀದೇವಿ



2013ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪುತ್ತೂರಿನ ಸಂತ ವಿಕ್ಟರ್ ಬಾಲಿಕೆಯರ ಪ್ರೌಢಶಾಲೆಯ ವಿದ್ಯಾರ್ಥಿನಿಯಾದ ಕುಮಾರಿ ಅಪೂರ್ವ ಶ್ರೀದೇವಿಯು 571 ಅಂಕಗಳೊಂದಿಗೆ (91.36%) ಉನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡಿದ್ದಾಳೆ.

ಓದಿನಲ್ಲಿ ಹೇಗೋ ಹಾಗೇ ಪಠ್ಯೇತರ ಚಟುವಟಿಕೆಗಳಲ್ಲೂ ಈಕೆ ಮುಂದು. ಶಾಸ್ತ್ರೀಯ ಸಂಗೀತ ಹಾಗೂ ನೃತ್ಯದಲ್ಲಿ ಆಸಕ್ತಿಯಿರುವ ಈಕೆ. ಕರ್ನಾಟಕ ಸಂಗೀತದಲ್ಲಿ ಸೀನಿಯರ್ ಹಾಗೂ ಶಾಸ್ತ್ರೀಯ ನೃತ್ಯದಲ್ಲಿ (ಭರತ ನಾಟ್ಯ) ಸೀನಿಯರ್ ಪರೀಕ್ಷೆಗಳನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿರುತ್ತಾಳೆ.

ಪುತ್ತೂರು ಕೊಡಿಪ್ಪಾಡಿಯಲ್ಲಿರುವ ಶ್ರೀ ಎನ್.ಎಸ್.ಹರಿಹರ ರಾವ್ ಮತ್ತು ಶ್ರೀಮತಿ ಶ್ಯಾಮಲಾ ರಾವ್ ದಂಪತಿಗಳ ಸುಪುತ್ರಿಯಾದ ಈಕೆಯ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಕು। ಸೌಮ್ಯ ಶ್ರೀ ರಾವ್



2012–13ನೇ ಸಾಲಿನ ಎಪ್ರಿಲ್ 30ರಲ್ಲಿ ನಡೆದ 10ನೆ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಸಿದ್ದಾಪುರದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಕು।ಸೌಮ್ಯಳು 93.6%(585) ಅಂಕಗಳನ್ನು ಪಡೆದು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ ಕುಂದಾಪುರ ತಾಲೂಕು ಸಿದ್ದಾಪುರ ಶ್ರೀಎನ್.ಶಿವರಾವ್ ರಾವ್ ಹಾಗೂ ಶ್ರೀಮತಿ ನಳಿನಾಕ್ಷಿ ದಂಪತಿಗಳ ಪುತ್ರಿ. ಈಕೆಯ ಸಾಧನೆಗೆ ಶ್ರೀಶರದಾ ಅಭಿನಂದನೆಗಳು

### ಹರ್ಷಿತ್ ರಾವ್



ಬಾರಕೂರು, ಮಸ್ಕಿಬೈಲ್ ಪಿ.ಜಯ ರಾಮ ರಾವ್ ಮತ್ತು ಶೋಭ.ಜೆ.ರಾವ್ ರವರ ಪುತ್ರ ಹರ್ಷಿತ್ ರಾವ್ ಇವರು ಪಿ.ಯು.ಸಿ. (commerse) ಯಲ್ಲಿ 560 ಅಂಕ (93.33%) ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಉಡುಪಿ ಪೂರ್ಣ ಪ್ರಜ್ಞ ಕಾಲೇಜಿನ ವಿದ್ಯಾರ್ಥಿಯಾದ ಈತ ಬಾಡ್ಮಿಂಟನ್ ಕ್ರೀಡೆಯೂ ಆಸಕ್ತನಾಗಿದ್ದಾನೆ. ಇತನ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

# ಡಾ. ಎ.ಪಿ.ಕೃಷ್ಣ ಅವರಿಗೆ ಸಂಶೋಧನಾ ದತ್ತಿ



ಭಾರತ ಸರಕಾರದ ಪರಮಾಣು ಶಕ್ತಿ ವಿಭಾಗವು ಡಾ. ಎ.ಪಿ. ಕೃಷ್ಣ ಅವರಿಗೆ ರೂಪಾಯಿ ಹನ್ನೆರಡು ಲಕ್ಷ ನಾಲ್ಕು ಸಾವಿರದ ಸಂಶೋಧನಾ ದತ್ತಿಯನ್ನು ಮಂಜೂರು ಮಾಡಿದೆ. ಈ ದತ್ತಿಯನ್ನು ì To Investigate the Amelioractive Effect of Lutein against Electron Beam Radiation Induced Oxidative Stress in vitro and in vivoî ಎಂಬ ಯೋಜನೆಗಾಗಿ ಕೊಡಮಾಡಿದೆ. ಡಾ. ಕೃಷ್ಣ ಅವರು ತಮ್ಮ ಈ ಸಂಶೋಧನಾ ಯೋಜನೆಯ ಮೂಲಕ ಕ್ಯಾನ್ಸರ್ ರೋಗದ ಚಿಕಿತ್ಸಾ ಪದ್ಧತಿಯಲ್ಲಿ ಬಳಸುವ ವಿಕಿರಣದ ದುಷ್ಪರಿಣಾಮಗಳನ್ನು ಕಡಿಮೆಗೊಳಿಸುವ ಔಷಧಿಯನ್ನು ಆವಿಷ್ಕರಿಸಲು ಬಳಸುವವರಿದ್ದಾರೆ.

ಡಾ. ಕೃಷ್ಣ ಅವರು ಪ್ರಸ್ತುತ ನಿಟ್ಟೆ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾಗಿರುವ ಮಂಗಳೂರಿನ ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿಯ ಶರೀರ ಶಾಸ್ತ್ರಕ್ರಿಯಾ ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರೂ ಆಗಿದ್ದಾರೆ.

ಅನಂತಪುರ ಶ್ರೀ ಶಂಕರನಾರಾಯಣಯ್ಯ ಮತ್ತು ಶ್ರೀಮತಿ ರಾಧಮ್ಮ ದಂಪತಿಗಳ ಪುತ್ರರಾದ ಡಾ. ಕೃಷ್ಣ ಅವರು ಮೂಲತಃ ಕುಂಬಳೆ ಸಮೀಪದ ಪ್ರಸಿದ್ಧ ಸ್ಥಾನಿಕ ಮನೆತನಗಳಲ್ಲೊಂದಾದ ಅನಂತಪುರದವರು.

ಇವರ ಪತ್ನಿ ಶ್ರೀಮತಿ ಸುಮನ್ ಕೃಷ್ಣ ಭಾಷಾ ಪ್ರಾಧ್ಯಾಪಿಕೆ. ಇವರ ಎರಡು ಹೆಣ್ಣುಮಕ್ಕಳಲ್ಲಿ ಹಿರಿಯವರಾದ ಡಾ. ಅಲಕಾ ಎಂ.ಬಿ.ಬಿ.ಎಸ್. ಶಿಕ್ಷಣವನ್ನು ಭಾರತದಲ್ಲಿ ಪೂರೈಸಿ ತನ್ನ ವೈದ್ಯಕೀಯ ವೃತ್ತಿ ಮತ್ತು ಎಂ.ಆರ್.ಸಿ.ಪಿ. ತರಬೇತಿಯನ್ನು ಇಂಗ್ಲೆಂಡಿನಲ್ಲಿ ನಡೆಸುತ್ತಿದ್ದಾರೆ. ತನ್ನ ಪತಿ ಹೃದಯ ತಜ್ಞ ಡಾ. ನಿಖಿಲ್ ಜೋಶಿಯವರ ಜೊತೆಯಲ್ಲಿ ಎಡಿನ್‌ಬರ್ಗ್‌ನಲ್ಲಿ ನೆಲೆಸಿರುತ್ತಾರೆ. ಕಿರಿಯ ಮಗಳು ಅಂಕಿತ ಬಿ.ಇ. ಪದವೀಧರೆ. ವಿವಾಹದ ಬಳಿಕ ತನ್ನ ಪತಿ ಸಂತೋಷ್‌ರೊಂದಿಗೆ ಅಮೇರಿಕಾದ ನ್ಯೂ ಜೆರ್ಸಿಯಲ್ಲಿ ವಾಸಿಸುತ್ತಿದ್ದಾರೆ.

# ವಿದೇಶ ಪ್ರಯಾಣ



ನಮ್ಮ ಸಂಘದ ಕೋಶಾಧಿಕಾರಿಯಾಗಿರುವ ಬಿ. ಕೃಷ್ಣಮೂರ್ತಿ ರಾವ್ ಇವರು ಪತ್ನಿ ಶ್ರೀಮತಿ ಇಂದಿರಾರವರೊಂದಿಗೆ ಲಂಡನ್‌ನಲ್ಲಿರುವ ತಮ್ಮ ಮಗಳು ಶ್ರೀಮತಿ ವಾಣಿ ಹಾಗೂ ಅಳಿಯ ವಿಜಯ ರಾವ್ ಮತ್ತು ಮೊಮ್ಮಕ್ಕಳಲ್ಲಿಗೆ 45 ದಿವಸಗಳ ಪ್ರವಾಸಕ್ಕಾಗಿ ತಾ.24-06-2013ರಂದು ತೆರಳಲಿರುವರು. ಇವರ ವಿದೇಶ ಪ್ರಯಾಣವು ಸುಖಕರವಾಗಲಿ ಎಂದು ಶ್ರೀಶಾರದಾ ಬಳಗವು ಹಾರೈಸುತ್ತದೆ.

## ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 15-06-2013 | **ಮಿಥುನ ಸಂಕ್ರಮಣ** |
| 19-06-2013 | **ಸ್ಮಾರ್ತೈಕಾದಶೀ** |
| 21-06-2013 | **ಪ್ರದೋಷಃ** |
| 22-06-2013 | **ಆರ್ದ್ರಾ ನಕ್ಷತ್ರಾರಂಭ** |
| 23-06-2013 | **ಪೂರ್ಣಿಮಾ** |
| 26-06-2013 | **ಸಂಕಷ್ಟ ಚತುರ್ಥಿ** (ಚಂದ್ರೋದಯ ರಾತ್ರಿ 9.54ಕ್ಕೆ.) |
| 04-07-2013 | **ಏಕಾದಶೀ** |
| 05-07-2013 | **ಪ್ರದೋಷಃ** |
| 06-07-2013 | **ಪುನರ್ವಸು ನಕ್ಷತ್ರಾರಂಭ** |
| 08-07-2013 | **ಅಮವಾಸ್ಯಾ** |
| 16-07-2013 | **ಕರ್ಕಾಟಕ ಸಂಕ್ರಮಣ** |

## ಶ್ರೀ ಶಾರದಾ

ಶೃಂಗೇರಿ ನೆಲೆಸಿರುವ ಶಾರದೆ।
ಶ್ರೀಹರಿಯ ನಾಡಿನಲ್ಲಿ ಬಾಂದವರೆದೆಯ
ಮಂಟಪದಿ ಕುಳಿತು॥
ಶೀವಿಯಲಿ ಮರೆದೆ।
ಗಾನ ನೃತ್ಯ ವಿಚಾರ ವಿಮರ್ಶೆ ನಡೆಸಿ।
ಸಾಗರ ಸಂಗಮದಂತೆ ಭಾಂದವರನು
ನಿನ್ನೆಡೆಗೆ ಸೆಳೆದೆ ಬಣ್ಣಿಸಲದಳವು
ಜ್ಞಾನ ದೇವತೆ ನಿನ್ನ।
ನೋವು ನಲಿವು ನುಡಿಮುತ್ತುಗಳ ಬಿತ್ತರಿಸಲು।
ಮಾಸಿಕದಿ ಒಮ್ಮೆ ಬಾಂಧವರ ಮನೆಗೆ।
।ನೀನಡೆದೆ।

**-ಎ.ಆರ್.ರಾವ್**
**ನಾರಾಯಣ ಆಶ್ರಮ ಪಡುಬಿದ್ರಿ**

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



**ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ : ಹೈಪರಥೈರೋಯ್ಡಿಸಂ ಎಂದರೇನು? ಅದರ ಚಿಕಿತ್ಸೆ ಹೇಗೆ?**

**ಉತ್ತರ :** ಕಳೆದ ಸಂಚಿಕೆಯಲ್ಲಿ ಕುತ್ತಿಗೆಯಲ್ಲಿರುವ ಥೈರೋಯ್ಡ್ ಗ್ರಂಥಿಯು ಥೈರೋಕ್ಸಿನ್ ಎಂಬ ಹಾರ್ಮೋನನ್ನು ಸ್ರವಿಸುವ ಬಗ್ಗೆ ಹಾಗೂ ಈ ಥೈರೋಕ್ಸಿನ್ ನಮ್ಮ ದೇಹದ ಮೇಲೆ ಮಾಡುವ ಪರಿಣಾಮಗಳನ್ನು ವಿವರಿಸಿದ್ದೆ. ಹಾಗೆಯೇ ಒಂದು ವೇಳೆ ಈ ಥೈರಾಯ್ಡ್ ಗ್ರಂಥಿಯು ಸರಿಯಾಗಿ ಕೆಲಸ ನಿರ್ವಹಿಸದೆ ಥೈರೋಕ್ಸಿನ್ ಹಾರ್ಮೋನಿನ ಕೊರತೆಯಾದರೆ ದೇಹದ ಮೇಲೆ ಉಂಟಾಗುವ ಪರಿಣಾಮಗಳನ್ನೂ ವಿವರಿಸಿದ್ದೆ. ಒಂದು ವೇಳೆ ಇದೇ ಥೈರೋಯ್ಡ್ ಗ್ರಂಥಿಯು ಅಗತ್ಯಕ್ಕಿಂತ ಹೆಚ್ಚು ಹಾರ್ಮೋನನ್ನು ಸ್ರವಿಸಿದರೂ ಅದು ದೇಹದ ಮೇಲೆ ಕೆಲವು ಅಡ್ಡಪರಿಣಾಮಗಳನ್ನು ಬೀರುತ್ತದೆ. ಈ ಅಡ್ಡಪರಿಣಾಮಗಳನ್ನು ಹೈಪರ್ಥೈರೋಯ್ಡಿಸಂ ಎಂದು ಕರೆಯುತ್ತೇವೆ.

ಥೈರೋಕ್ಸಿನ್ ಹಾರ್ಮೋನ್ ನಮ್ಮ ದೇಹದ ಎಲ್ಲಾ ಅಂಗಗಳು ಚಟುವಟಿಕೆಯಿಂದಿರುವಂತೆ ನೋಡಿಕೊಳ್ಳುವ ಹಾರ್ಮೋನ್. ಈ ಹಾಮೋನ್ ಈ ಹಾರ್ಮೋನ್‌ನ ಕೊರತೆಯಾದರೆ ದೇಹದ ಅಂಗಗಳು ತಮ್ಮ ಕೆಲಸವನ್ನು ನಿಧಾನವಾಗಿ ಮಾಡುತ್ತವಾದರೆ ಹೈಪರ್ಥೈರೋಯ್ಡಿಸಂನಲ್ಲಿ ಅಂಗಗಳ ಚಟುವಟಿಕೆ ಅಗತ್ಯಕ್ಕಿಂತ ಹೆಚ್ಚಾಗುತ್ತದೆ. ಹೃದಯದಬಡಿತ ಹೆಚ್ಚುತ್ತದೆ. ಅದು ತುಂಬಾ ಹೆಚ್ಚಿ ಅದರ ಬಡಿತದ ತಾಳ ತಪ್ಪಬಹುದು. ಕರುಳಿನ ಪರಿಚಲನೆ ಹೆಚ್ಚಿ ಪದೇ ಪದೇ ಬೇಧಿಯಾಗುವುದು, ಹೆಚ್ಚು ಬೆವರುವುದು, ಹಸಿವೆ ಹೆಚ್ಚಾಗುವುದು, ಕೆಲಸದಲ್ಲಿ ಗಡಿಬಿಡಿ, ಗಾಬರಿ, ಉದ್ವೇಗ, ಕೈಕಾಲುಗಳಲ್ಲಿ ನಡುಕ, ಮುಟ್ಟು ಬೇಗನೇ ಆಗುವುದು ಹೀಗೆ ದೇಹದ ಚಟುವಟಿಕೆ ಹೆಚ್ಚಾದಾಗ ತೋರುವ ಚಿಹ್ನೆಗಳು ಕಂಡುಬರುತ್ತವೆ. ಕುತ್ತಿಗೆಯಲ್ಲಿ ಥೈರೋಯ್ಡ್ ಗ್ರಂಥಿಯೂ ಊದಿಕೊಂಡಿರುವುದನ್ನೂ ಕಾಣಬಹುದು.

ಗ್ರೇವ್ಸ್ ಡಿಸೀಸ್ ಎಂಬ ಖಾಯಿಲೆಯು ಥೈರೋಯ್ಡ್ ಗ್ರಂಥಿ ಅಗತ್ಯಕ್ಕಿಂತ ಹೆಚ್ಚು ಹಾರ್ಮೋನ್ ಸ್ರವಿಸುವಂತೆ ಮಾಡುವ ಸಾಮಾನ್ಯ ಕಾರಣ. ಥೈರೋಯ್ಡ್ ಗ್ರಂಥಿಯ ಊತ (Thyroiditis) ಎರಡನೇ ಸಾಮಾನ್ಯ ಕಾರಣ. ಅಯೋಡಿನ್ ಕೊರತೆಯಿಂದಾಗುವ ಗೋಯ್ಟರ್ (Goiter) ಖಾಯಿಲೆಯಲ್ಲೂ ಕೆಲವೊಮ್ಮೆ ಈ ತೊಂದರೆ ಕಾಣಬರುವುದುಂಟು. ಕೆಲವು ಔಷಧಿಗಳ ಪ್ರಭಾವದಿಂದಲೂ ಹೀಗಾಗಬಹುದು.

ಗ್ರೇವ್ಸಿ ಡಿಸೀಸ್ ಹೆಚ್ಚಾಗಿ ಹದಿಹರೆಯದಲ್ಲಿ ಆರಂಭವಾಗುವ ಖಾಯಿಲೆ. ಈ ಕಾಯಿಲೆಯಲ್ಲಿ ಥೈರೋಯ್ಡ್ ಗ್ರಂಥಿ ಊದಿಕೊಂಡು ಅಗತ್ಯಕ್ಕಿಂತ ಹೆಚ್ಚು ಹಾರ್ಮೋನನ್ನು ಸ್ರವಿಸುವುದರ ಜೊತೆಗೆ ಅವರಲ್ಲಿ ಕಣ್ಣುಗುಡ್ಡೆಗಳು ಸ್ವಲ್ಪ ಹೊರಗೆ ಬಂದಂತೆ (ಕಪ್ಪೆಯ ಕಣ್ಣಿನ ಹಾಗೆ) ಕಾಣುತ್ತದೆ. ಇನ್ನು ಎರಡನೇ ಕಾರಣವಾದ ಥೈರೋಯ್ಡ್ ಗ್ರಂಥಿಯ ಊತವು (Thyroiditis) ಹೆಚ್ಚಾಗಿ ಮಧ್ಯವಯಸ್ಸಿನ ಹೆಂಗಸರಿಗೆ ಕಾಡುತ್ತದೆ. ಆದರೂ ಈ ಖಾಯಿಲೆ ಸ್ವಲ್ಪ ಸಮಯ ಮಾತ್ರವಿದ್ದು ನಂತರ ತನ್ನಿಂತಾನಾಗೆ ಗುಣವಾಗುವುದುಂಟು. ಕೆಲವೊಮ್ಮೆ ಮುದಿಪ್ರಾಯದಲ್ಲಿ ಥೈರೊಯ್ಡ್ ಗ್ರಂಥಿಯು ಏನೂ ಕಾರಣವಿಲ್ಲದೆ ಹೆಚ್ಚು ಹಾರ್ಮೋನನ್ನು ಸ್ರವಿಸುವುದುಂಟು.

ರಕ್ತದಲ್ಲಿ ಥೈರೋಯ್ಡ್ ಹಾರ್ಮೋನಿನ ಮಟ್ಟವನ್ನು ಅಳೆಯುವುದರ ಮೂಲಕ ಈ ಖಾಯಿಲೆಯನ್ನು ಖಚಿತಪಡಿಸಿಕೊಳ್ಳಬಹುದು. ಖಾಯಿಲೆಯನ್ನು ಖಚಿತಪಡಿಸಿಕೊಂಡ ಮೇಲೆ ಥೈರೋಯ್ಡ್ ಹಾರ್ಮೋನಿನ ಮಟ್ಟವನ್ನು ಕಡಿಮೆಮಾಡುವ ಔಷಧಗಳನ್ನು ಸೇವಿಸುವುದರ ಮೂಲಕ ಈ ಖಾಯಿಲೆಯನ್ನು ಹತೋಟಿಗೆ ತರಬಹುದು. ಒಮ್ಮೆ ಥೈರೋಯ್ಡ್ ಹಾರ್ಮೋನಿನ ಮಟ್ಟ ಮಾಮೂಲು ಸ್ಥಿತಿಗೆ ಬಂದ ಮೇಲೆ ಥೈರೋಯ್ಡ್ ಗ್ರಂಥಿಯನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ಹಾಕುವ ಮೂಲಕ ಈ ಖಾಯಿಲೆಯನ್ನು ಗುಣಪಡಿಸಿಕೊಳ್ಳಬಹುದು. ಈ ಶಸ್ತ್ರಚಿಕಿತ್ಸೆ ಮಾಡುವಾಗ ವೈದ್ಯರು ನಮ್ಮ ದೇಹಕ್ಕೆ ಬೇಕಾಗುವಷ್ಟು ಥೈರೊಯ್ಡ್ ಗ್ರಂಥಿಯನ್ನು ಉಳಿಸಿ ಉಳಿದ ಭಾಗವನ್ನು ಮಾತ್ರ ತೆಗೆಯುತ್ತಾರೆ.

ಥೈರೋಯ್ಡ್ ಗ್ರಂಥಿಯು ಆಹಾರದಲ್ಲಿರುವ ಅಯೋಡಿನ್ ಎಂಬ ಮೂಲವಸ್ತುವನ್ನು ತನ್ನಲ್ಲಿ ಶೇಖರಿಸಿ ಥೈರೋಕ್ಸಿನ್ ಹಾರ್ಮೋನನ್ನು ತಯಾರಿಸುತ್ತದೆ. ರೇಡಿಯೋ ಅಯೋಡಿನ್ ಎಂಬ ವಿಕಿರಣಯುಕ್ತ ಅಯೋಡಿನ್ ಅನ್ನು ಔಷಧಿಯಾಗಿ ನೀಡಿದಾಗ ಅದು ಥೈರೋಯ್ಡ್ ಗ್ರಂಥಿಯಲ್ಲಿ ಶೇಖರವಾಗುತ್ತದೆ. ಹೀಗೆ ಥೈರೋಯ್ಡ್ ಗ್ರಂಥಿಯಲ್ಲಿ ಶೇಖರಗೊಂಡ ಈ ವಿಕಿರಣಯುಕ್ತ ಅಯೋಡಿನ್ ಥೈರೋಯ್ಡ್ ಗ್ರಂಥಿಯ ಜೀವಕೋಶಗಳನ್ನು ನಾಶಮಾಡುತ್ತದೆ. ಆಗ ರಕ್ತದಲ್ಲಿ ಥೈರೋಯ್ಡ್ ಹಾರ್ಮೋನಿನ ಮಟ್ಟ ಕಡಿಮೆಯಾಗುತ್ತದೆ. ಇದು ಹೈಪರ್ಥೈರೋಯ್ಡಿಸಂ ಖಾಯಿಲೆಗೆ ಬಳಕೆಯಾಗುತ್ತಿರುವ ಆಧುನಿಕ ಚಿಕಿತ್ಸೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 9845136322**





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2013-2014ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2013ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.2,00,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2013ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 101.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)





## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.26-05-2013) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-06-2013 ಪಂಚಮಿ ಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**


**ತಾ.23-06-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**



*Krishna Rao*

Ph : 2520652
Mob. : 9902029048

**KISHAN**




**Studio & Video**



**Indoor Photography & Port Folio Photography, Video & Mixing, Lamination**

MAIN ROAD, MAJOOR & BANTAKAL.

## ದೇವಿಕೃಪಾ ಏಜೆನ್ಸೀಸ್, ನಂದಿಕೂರು



**ಫೋನ್ : 2556536 (R), 2555466 (O), Mobile : 9845149521**

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



**ಎಮ್. ದೇವಾನಂದ್ ಭಟ್**

**Cell : 9845644556**
**9483913344**




ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

**ಬೆಳ್ವಾಯಿ-574213** (08258)-276177 (O)
**ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್** 9901995655
**ಎಡಪದವು - 574 164** (0824)-2256374 (O) **ಮಂಗಳೂರು, ದ.ಕ.**

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ಪ್ರೊ : ಸುಧಾಕರ್ ರಾವ್ ಬೆಳ್ಳೆ**



## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093


Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org